


ಕಲ್ಯಾಣ ಕಿರಣ



ಆಗಸ್ಟ್-2013

ಬೆಲೆ: 20/-



ಡಿವೈನ್ ಹಾಂಡ್ಸ್ ಇಂಟರ್ ನ್ಯಾಷನಲ್ ಯೂನಿವರ್ಸಿಟಿಯ ಪರವಾಗಿ
ಪೂಜ್ಯ ಶ್ರೀ ಮಹಾ ಜಗದ್ಗುರು ಮಾತೆ ಮಹಾದೇವಿಯವರಿಗೆ ಗೌರವ ಡಾಕ್ಟರೇಟ್ ಪ್ರದಾನ



ಶರಣ ರತ್ನ ಪ್ರಶಸ್ತಿಯನ್ನು ಬಸವ ಧರ್ಮಪೀಠದಿಂದ ಕೊಡಲಾಯಿತು
ಡಾ|| ಎಸ್. ಪ್ರಭುದೇವ, ಕುಮಾರಿ ಅಶ್ವಿನಿ ಅಂಗಡಿ, ಡಾ|| ಆರ್. ಶಿವಣ್ಣ



818 ನೆಯ ಬಸವಲಿಂಗೈಕ್ಯ ಸಂಸ್ಮರಣೆಯಲ್ಲಿ ಬಸವ ಧ್ವಜಾರೋಹಣ



ಕಾರ್ಯಕ್ರಮ ಉದ್ಘಾಟನೆ: ಸಣ್ಣ ಕೈಗಾರಿಕೆ ಉದ್ಯಮ ನಿಗಮದ ಆಯುಕ್ತರಾದ
ಡಾ|| ಸಿ. ಸೋಮಶೇಕರ್. ಐ. ಎ. ಎಸ್ ಅವರಿಂದ



ಶರಣ. ಡಾ|| ಸಿ. ಸೋಮಶೇಖರ್. ಐ. ಎ. ಎಸ್ ಅವರಿಗೆ ಸತ್ಕಾರ

ಯುಗದ ಧರ್ಮೋತ್ಸಾಹ

ಬಸವ ಧರ್ಮ ಯುಗದ ಮರು ಮಹಾಉತ್ಸವ ನೋಡಿರೆ....
ವಿಶ್ವಕಲ್ಯಾಣ ಮಿಷನ್ ಧರ್ಮ ಶುಭೋದಯದಿ
ಬಸವ ಧರ್ಮ ಮಹಾ ಪೀಠದ ಓಂಕಾರ ಶ್ರೀಕಾರದಿ
ರಾಷ್ಟ್ರೀಯ ಬಸವ ದಳಗಳ ಧರ್ಮ ವೀರತ್ವದಿ
ಲಿಂಗಾಯತ ಧರ್ಮ ಮರು ಹೊಳಪ ಮಿಂಚಿನಲಿ
ಯುಗದ ಧರ್ಮೋತ್ಸಾಹ ನೋಡಿರೇ........
ಬಸವ ಧರ್ಮ ಯುಗದ ಮರು ಮಹಾ ಉತ್ಸವ ನೋಡಿರೆ....

ಪ್ರವಚನ ಪಿತಾಮಹ ಮಹಾಗುರು ಲಿಂಗಾನಂದರು
ವಿಶ್ವಧರ್ಮ ಪ್ರವಚನ ಪಿತಾಮಹರೆನಿಸುತ
ಬಸವ ಧರ್ಮ ಪ್ರವಚನದ ಮಹಾಶಕ್ತಿ ಮಹಾಮಾತೆ
ಯುಗ ಮಹಿಳಾ ಮಹಾಜಗದ್ಗುರು ಪ್ರಥಮ ಪ್ರಮಥರಾಗಿ
ಬಸವ ತತ್ವ ಸಿದ್ಧಾಂತಗಳ ಸಾಧಿಸಿ ಅರುಹುತ
ಸೃಷ್ಟಿಕರ್ತ ಲಿಂಗದೇವ ಬಸವ ಧರ್ಮದ ದೇವ ಕುರುಹೆಂದು
ಗುರು ಮಿಗಿಲಾಗಿ ಶರಣರ ನಿರಾಕಾರ ಲಿಂಗದೇವನ ಸಾಕ್ಷಾತ್ಕರಿಸಿದ
ಶರಣರೆಲ್ಲರ ಮಾತೃಹೃದಯಿ ಮಹಾಮಾತಾಜಿ ಚಿತ್ಕಳೆಯಲಿ
ಯುಗದ ಧರ್ಮೋತ್ಸಾಹ ನೋಡಿರೆ........

ಬೆಂಗಳೂರಲಿ ಧರ್ಮಪಿತ ಬಸವ ಮಹಾಮಂಟಪ
ಕೂಡಲ ಸಂಗಮದಲಿ ಬಸವ ಧರ್ಮದ ಮಹಾಮನೆ ಮಹಾಪೀಠ
ಧಾರವಾಡದಲಿ ಜಗನ್ಮಾತೆ ಅಕ್ಕಮಹಾದೇವಿ ಅನುಭಾವ ಪೀಠ
ಬಸವ ಗಂಗೋತ್ರಿಯಲಿ ಚಿನ್ಮಯಜ್ಞಾನಿ ಚನ್ನಬಸವ ಜ್ಞಾನಪೀಠ
ಬಸವ ಕಲ್ಯಾಣದಲಿ ಶೂನ್ಯ ಪೀಠಾಧೀಶ ಮಹಾಯೋಗಿ ಅಲ್ಲಮಪೀಠ
ಬಸವ ಭೀಮ ತೀರದ ಅಳತೆಯಲಿ ಯೋಗಿನಾಥ ಸಿದ್ಧರಾಮ ಪೀಠ
ರಾಜಧಾನಿ ನವದೆಹಲಿಯಲಿ ಮಾತಾ ಆಶ್ರಮ
ಭವ್ಯ ಭಾರತದ ಉದ್ದಗಲಕ್ಕೂ ಬಸವ ಧರ್ಮ ಪಸರಿಸುವ
ಯುಗದ ಧರ್ಮೋತ್ಸಾಹ ನೋಡಿರೇ........

ಶ್ವೇತ ಉಡುಪು ಧಾರಣೆಯ ಶರಣ ಕಾಯ
ಭುಜದಲಿ ಶ್ರೀಗುರುಬಸವ ರಕ್ಷೆಯ ಧರ್ಮಕವಚ
ನೊಸಲಿನಲಿ ತ್ರಿಕಾಲ ಜ್ಞಾನದ ಶ್ರೀ ವಿಭೂತಿ ಲಾಂಛನ
ಕೊರಳಲಿ ಸೃಷ್ಟಿಕರ್ತ ಲಿಂಗದೇವನ ಹೃದಯಲಿಂಗಧಾರಣೆ
ಹಸ್ತದಲಿ ಶ್ರೀಗುರು ಬಸವ ವಚನಾಮೃತದ ಗ್ರಂಥಪುಷ್ಪ
ನುಡಿಗಳಲಿ ತುಂಬಿಹುದು ದೇವಮಂತ್ರ ಧರ್ಮಗುರು ಮಂತ್ರದ ಓಂಕಾರ
ನಡೆಯಲಿ ಹೆಜ್ಜೆಗುರುತಾಗಿಹುದು ಗುರು ಬಸವ ಸಿದ್ಧಾಂತದ ಝೇಂಕಾರ
ಅನುದಿನವು ಇಲ್ಲಿಹುದು ನೆನಹು ಪ್ರಾರ್ಥನೆ ಮೇಳಗಳ ಬಸವ ಹರ್ಷಧಾರೆ
ಇಂತಿರ್ಪ ಲಿಂಗದೇವಾ ಚಿತ್ಕಳೆ ಪೂರ್ಣ ಮಹಾ ಮಾತಾಜಿ ಬಸವ ತೇಜದಲಿರ್ಪ
ಯುಗದ ಧರ್ಮೋತ್ಸಾಹ ನೋಡಿರೆ........
ಬಸವ ಧರ್ಮ ಯುಗದ ಮರು ಮಹಾ ಉತ್ಸವ ನೋಡಿರೆ....

– ಸೋ.ದಾ.ವಿರೂಪಾಕ್ಷಗೌಡ, ಹೊಸಪೇಟೆ

|| ಓಂ ಶ್ರೀ ಗುರು ಬಸವಲಿಂಗಾಯ ನಮಃ ||
866666

ಸಂಪುಟ-44 ಬಸವ ಶಕೆ -879 ಪಂಚ ವಾರ್ಷಿಕ ಸದಸ್ಯತ್ವ 1000 ರೂ.
ಸಂಚಿಕೆ-8 ಆಗಸ್ಟ್-2013 ವಾರ್ಷಿಕ ಚಂದಾ 200 ರೂ.

ಕಿರಣ ಗನ್ನಡಿ

ಸೆಪ್ಟಂಬರ್-ಅಕ್ಟೋಬರ್ ತಿಂಗಳಿನ ಹಬ್ಬ - ಹುಣ್ಣಿಮೆ-ಉತ್ಸವ

ದಿ.9-9-2013- *ಬಸವ ಜ್ಯೋತಿ ಸಮಾರೋಪ
*ಪೂಜ್ಯ ಲಿಂಗಾನಂದ ಸ್ವಾಮಿಗಳ 83ನೆಯ ಜಯಂತಿ
*ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ 55ನೆಯ ವರ್ಧಂತಿ
*ರಾಷ್ಟ್ರೀಯ ಬಸವ ದಳದ ಹುಟ್ಟುಹಬ್ಬ
*12ನೆಯ ಕಲ್ಯಾಣ ಪರ್ವ ಅಕ್ಟೋಬರ್ 16, 17ಮತ್ತು 18ರಂದು

ಕಲ್ಯಾಣ ಕಿರಣ ಚಂದಾ

ಕಲ್ಯಾಣ ಕಿರಣದ ವಾರ್ಷಿಕ ಚಂದಾ 200ರೂ. ಪಂಚವಾರ್ಷಿಕ ಚಂದಾ 1000ರೂ. ಕಳಿಸಬೇಕು ಎನ್ನುವವರು ಎಂ.ಓ. ಮೂಲಕ, ಬ್ಯಾಂಕ್ ಡ್ರಾಫ್ಟ್ ಮೂಲಕ ಕಳಿಸಬಹುದು. ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್ ಹೆಸರಿಗೆ ಡಿ.ಡಿ. ತೆಗೆಸಬೇಕು. ಹಣ Transfer ಮಾಡುವವರು Bank of India, Rajajinagar, Bangalore-560010ದ Viswakalyan Mission Charitable Trust ದ S.B.A/c 840610100016409 ಖಾತೆಗೆ ನೇರವಾಗಿ ವರ್ಗಾಯಿಸಬಹುದು. NEFT ಮೂಲಕ ಬೇರೆ ಬ್ಯಾಂಕಿನಿಂದ ಕಳಿಸುವವರಿಗೆ IFSC: BK ID 0008406 ವರ್ಗಾವಣೆ ಮಾಡಿದ ನಂತರ ವಿವರಗಳನ್ನು ಫೋನ್ ಮೂಲಕ ಅಥವಾ ಪತ್ರದ ಮೂಲಕ ತಿಳಿಸಬೇಕು.

ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್
ಬಸವ ಮಂಟಪ, 2035, 20ನೇ ಮೇನ್, ರಾಜಾಜಿನಗರ 2ನೇ ಬ್ಲಾಕ್,
ಬೆಂಗಳೂರು-560010

Kalyana Kirana -Reg No.19988/70. Monthly Magazine Edited and Published by Pujya Mate Kasturidevi on behalf of Vishwa kalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-560010. Phone : 080-23131476, Send SMS to 9945806297/ 9738028585/ 8892912123
Email :- kalyanakirana1970@gmail.com

ಸಂಪಾದಕೀಯ :

ಜಾತಿ ಪ್ರಜ್ಞೆಯ ಅಪಾಯ

ಕೂಡಲ ಸಂಗಮದಲ್ಲಿ ಸರ್ಕಾರದ ಸಭಾಭವನ ಸುಂದರವಾಗಿ ಆಗಿರುವುದರಿಂದ ಅಲ್ಲಿ ಆಗಾಗ ಅನೇಕ ಸಮಾವೇಶಗಳು ನಡೆಯುತ್ತವೆ. ಒಮ್ಮೆ ಹಡಪದ ಸಮಾಜದವರ ಕಾರ್ಯಕ್ರಮ ನಡೆಯಿತಂತೆ. ಹಡಪದ ಅಪ್ಪಣ್ಣ-ಲಿಂಗಮ್ಮನವರ ಭಾವಚಿತ್ರ ಮುದ್ರಿಸಿದ್ದೇವೆ. ಅದರಲ್ಲಿ ಮೇಲೆ ಎಡ ತುದಿಯಲ್ಲಿ ಶರಣ. ಅಪ್ಪಣ್ಣನವರು ಗುರು ಬಸವಣ್ಣನವರಿಗೆ ಕ್ಷೌರ ಮಾಡುವ ಚಿತ್ರವನ್ನು ಕೊಡಲಾಗಿದೆ. ಆಗ ಕಾರ್ಯಕ್ರಮಕ್ಕೆ ಬಂದಿದ್ದ ಓರ್ವರು ಹೇಳಿದರಂತೆ. "ಫೋಟೋದಲ್ಲಿ ಅಪ್ಪಣ್ಣನವರು ಕ್ಷೌರ ಮಾಡುವ ಚಿತ್ರವನ್ನು ಹಾಕಬಾರದಾಗಿತ್ತು. ಅಪ್ಪಣ್ಣನವರು ಬಸವಣ್ಣನವರಿಗೆ ತಾಂಬೂಲವನ್ನು ಕುಟ್ಟಿಕೊಡುವ ಚಿತ್ರ ಹಾಕಬಹುದಿತ್ತು." ಇದನ್ನು ಕೇಳಿ ನನಗೆ ಬಹಳ ಆಶ್ಚರ್ಯವಾಯಿತು. ಯಾವ ಕಾಯಕವೂ ಮೇಲಲ್ಲ, ಕೀಳಲ್ಲ, ಎಲ್ಲ ಕಾಯಕವೂ ಶ್ರೇಷ್ಠವೆ. ಈ ರೀತಿ ಗುರು ಬಸವಣ್ಣನವರು ಬೋಧಿಸಿದರು, ನಾವೂ ಪ್ರತಿಪಾದಿಸಿ ಕಾಯಕಗಳ ಗೌರವ ಎತ್ತಿ ಹಿಡಿಯುತ್ತೇವೆ. ಆದರೆ ಸ್ವತಃ ಹಡಪದ (ಕ್ಷೌರಿಕ)ದವರೇ ತಮ್ಮ ಕಾಯಕದ ಬಗ್ಗೆ ಕೀಳರಿಮೆ ಹೊಂದಿರುವುದನ್ನು ಕಂಡು ನನಗೆ ಅಚ್ಚರಿಯಾಯಿತು.

ಬೇರೆ ಬೇರೆ ಜಾತಿಯವರು ತಮ್ಮ ಕುಲದ ಶರಣರಾದ ಸಮಗಾರ ಹರಳಯ್ಯ, ಅಂಬಿಗರ ಚೌಡಯ್ಯ, ಹಡಪದ ಅಪ್ಪಣ್ಣ ಮುಂತಾದವರ ಫೋಟೋ ಬೇಕೆಂದು ಬೇಡಿಕೆ ಸಲ್ಲಿಸುತ್ತಾರೆ. ಆದರೆ ಎಲ್ಲರೂ ಅವರು ಲಿಂಗಪೂಜೆಗೆ ಕುಳಿತ ಭಂಗಿಯೇ ಬೇಕೆನ್ನುತ್ತಾರೆ. ಹಾಗೆ ಮಾಡಿದರೆ ನಾವು ವಿವಿಧ ಶರಣರನ್ನು ಗುರುತು ಹಿಡಿಯುವುದೆಂತು? ಅವರವರ ಕಾಯಕಗಳೊಡನೆ ಅವರನ್ನು ಚಿತ್ರಿಸುವುದೇ ಸೂಕ್ತವಲ್ಲವೆ ?

ಹರಳಯ್ಯ ಸಮಾಜದ ಒಬ್ಬರು ಬಂದಿದ್ದರಂತೆ. ಅವರು, "ನೀವು ಬಸವಣ್ಣನವರಿಗೇ ಹೆಚ್ಚಿನ ಮಹತ್ವ ಕೊಡುತ್ತೀರಿ" ಎಂದರಂತೆ. "ಅಹುದಪ್ಪ, ಎಲ್ಲ ಶರಣರು ಬೆಳಕಿಗೆ ಬಂದುದು ಗುರು ಬಸವಣ್ಣನವರಿಂದಲೇ." ಎಂದರೆ, "ಇಲ್ಲ, ಬಸವಣ್ಣನವರಿಗಿಂತಲೂ ಹರಳಯ್ಯನವರೇ ದೊಡ್ಡವರು" ಎನ್ನುತ್ತಾ ಆತ ಹೋದನಂತೆ. ಒಂದು ವೇಳೆ ಗುರು ಬಸವಣ್ಣನವರು ಎಲ್ಲ ಜಾತಿಮತ ಜನಾಂಗದವರಿಗೆ ದೀಕ್ಷೆ ಕೊಡದಿದ್ದರೆ ಅವರೆಲ್ಲರೂ ಶರಣರ ಸಾಲಿನಲ್ಲಿ ಸೇರಲು ಸಾಧ್ಯವಿತ್ತೆ? ಸ್ವತಃ ಅಲ್ಲಮ ಪ್ರಭುದೇವರಂತಹ ದಾರ್ಶನಿಕ ದಿಗ್ಗಜರು, "ನಿನ್ನಿಂದ ನಾನಾದೆನಲ್ಲದೆ ಎನಗೆ ಬೇರೆ ಸ್ವತಂತ್ರವುಂಟೆ?" ಎಂದಿರುವಾಗ ಉಳಿದ ಶರಣರ ಬಗ್ಗೆ ಹೇಳುವುದೇ ಬೇಡ.

ಜಾತಿ ಪ್ರಜ್ಞೆಯ ಉದ್ರೇಕ

ಹಿಂದು ಸಮಾಜ ಒಡೆದ ಕನ್ನಡಿಯಂತೆ, ನೂರಾರು ಜಾತಿಗಳ ಗುಂಪು ಇಲ್ಲಿ. ಇದರ ವಿರುದ್ಧ ಹೋರಾಟ ಮಾಡಿದವರು ಗುರು ಬಸವಣ್ಣನವರು. ಎಲ್ಲ ಜಾತಿಗಳ ಶರಣರನ್ನೂ ಅನುಭವ ಮಂಟಪವೆಂಬ ತಾರಾಪುಂಜದಲ್ಲಿ ಸೇರಿಸಿದರು. ಆಯಾ ಸಮಾಜಗಳವರು ತಮ್ಮ ಕುಲದಲ್ಲಿ ಆಗಿ ಹೋದ ಶರಣರನ್ನು ಶ್ರದ್ಧಾಕೇಂದ್ರವಾಗಿಟ್ಟುಕೊಂಡು ಇಂದು ತಂತಮ್ಮ ಜಾತಿಗಳ ಸಂಘಟನೆ ಮಾಡುತ್ತಿರುವರು. ತಾವು ಲಿಂಗಧಾರಿಗಳಾಗಿರದಿದ್ದರೂ ಮಡಿವಾಳ ಸಮಾಜದವರು ಮಡಿವಾಳ ಮಾಚಿದೇವರನ್ನು ಇಷ್ಟಲಿಂಗವಿರಹಿತರನ್ನಾಗಿ ಮಾಡಿಲ್ಲ. ಸಮಗಾರ ಹರಳಯ್ಯ, ಡೋಹರ ಕಕ್ಕಯ್ಯ ಸಮಾಜದವರೂ ಅಷ್ಟೆ. ತಮ್ಮ ಶರಣರ ಇಷ್ಟಲಿಂಗ ಬಿಡಿಸಿಲ್ಲ. ಗುರು ಬಸವಣ್ಣನವರ ಬಗ್ಗೆ ಅಪಾರ ಗೌರವ ಹೊಂದಿದ್ದಾರೆ. ಇತ್ತೀಚೆಗೆ ಅಂಬಿಗರ ಚೌಡಯ್ಯನವರ ಸಮಾಜದವರು ಒಂದು ಫೋಟೊ ಬರೆಸಿದ್ದು ಚೌಡಯ್ಯನವರ ಕೊರಳಲ್ಲಿ ಇಷ್ಟಲಿಂಗವಿಲ್ಲವಂತೆ. ಅವರ ನೂರಾರು ವಚನಗಳು ಇಷ್ಟಲಿಂಗ ನಿಷ್ಠೆ ಕುರಿತೇ ಇವೆ. ಆ ವಚನಗಳನ್ನು ಕೈಬಿಡಬೇಕೆ? ತಾವು ಏನಾದರೂ ಆಚರಣೆ ಮಾಡಿಕೊಳ್ಳಲಿ, ಆದಿ ಶರಣರನ್ನಾದರೂ ಅವರ ಪಾಡಿಗೆ ಅವರನ್ನು ಈ ಜಾತಿವಾದಿಗಳು ಕೈಬಿಡಬಾರದೆ? ಇಂಥ ಜಾತಿಪ್ರಜ್ಞೆ ಬಹಳ ಅಪಾಯಕಾರಿ!

ಓಂ ಶ್ರೀ ಗುರು ಬಸವಲಿಂಗಾಯ ನಮ:

866666

ಕಾಯಕವೇ ಕೈಲಾಸವೆಂಬ ಮಹಾಮಂತ್ರವನ್ನು ಸಾರಿದ ಬಸವ ಕಲ್ಯಾಣ ಸುಕ್ಷೇತ್ರದಲ್ಲಿ ಹನ್ನೆರಡನೆಯ

ಕಲ್ಯಾಣ ಪರ್ವ

2013ರ ಅಕ್ಟೋಬರ್ 16,17 ಮತ್ತು 18ರಂದು

ಶರಣ ಬಂಧುಗಳಿಗೆ ಶರಣು ಶರಣಾರ್ಥಿ.

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಶರಣ ಗಣಮಣಿ ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವಾಯತರೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಆವಶ್ಯಕ. ಇದು ಸಮಾನತೆ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲಸಂಗಮದಲ್ಲಿ ಶರಣ ಮೇಳ ಎಂಬ ಬೃಹತ್ ಧಾರ್ಮಿಕ ಸಮಾವೇಶವನ್ನು 1988ರಿಂದ ಪ್ರತಿವರ್ಷವೂ ಜನವರಿ 11 ರಿಂದ 15ರವರೆಗೆ ನಡೆಸಿಕೊಂಡು ಬರಲಾಗುತ್ತಿದ್ದು 26ನೆಯ ಶರಣ ಮೇಳವು ಇದೇ 2013ರ ಜನವರಿಯಲ್ಲಿ ಯಶಸ್ವಿಯಾಗಿ ಜರುಗಿದೆ. ಬೀದರ ಜಿಲ್ಲೆಯಲ್ಲಿರುವ ಬಸವ ಕಲ್ಯಾಣವು 12ನೆಯ ಶತಮಾನದಲ್ಲಿ ವಿಶ್ವಗುರು ಬಸವಣ್ಣನವರ ಕಾರ್ಯಕ್ಷೇತ್ರವಾಗಿತ್ತು. ಲಿಂಗದೇವನ ಅನುಗ್ರಹವಾಗಿ ಇಷ್ಟಲಿಂಗದ ಪರಿಕಲ್ಪನೆ ಮೂಡಿ ಧರ್ಮಪಿತರು ಲಿಂಗಾಯತ ಧರ್ಮದ ರೂಪು ರೇಷೆ ಹಾಕಿದುದು ಕೂಡಲ ಸಂಗಮದಲ್ಲಿ. ಆ ನೀಲನಕ್ಷೆಯು ಕಾರ್ಯರೂಪಕ್ಕೆ ಬಂದುದು ಬಸವ ಕಲ್ಯಾಣದಲ್ಲಿ.

"ಕಪಿಲಸಿದ್ಧಮಲ್ಲಿಕಾರ್ಜುನಾ, ನಿಮ್ಮ ಸಂಗನ ಬಸವಣ್ಣ ಬಂದು
ಕಲ್ಯಾಣದಲ್ಲಿ ಮಹಾಮನೆಯ ಕಟ್ಟಿದಡೆ
ಮರ್ತ್ಯಲೋಕವೆಲ್ಲವೂ ಭಕ್ತಿ ಸಾಮ್ರಾಜ್ಯವಾಯಿತು"

ಎಂದು ಬಸವಯೋಗಿ ಸಿದ್ಧರಾಮೇಶ್ವರರು ಹೇಳುವಂತೆ, "ಅಯ್ಯಾ, ಭಕ್ತಿಗೆ ಬೀಡಾದುದು ಕಲ್ಯಾಣ 36 ವರ್ಷ, ಅನುಭವಕ್ಕೆ ಶಿವಸದನವಾದುದು 27 ವರ್ಷ" ಎಂದು ಧರ್ಮಪಿತರು ಸಾರುವಂತೆ ಬಸವ ಕಲ್ಯಾಣವು ವಿಕ್ರಮನಾಮ ಸಂವತ್ಸರ (ಕ್ರಿ.ಶ.1160) ದಿಂದ ರಾಕ್ಷಸನಾಮ ಸಂವತ್ಸರ (ಕ್ರಿ.ಶ.1196)ದ ವರೆಗೆ ಶ್ರೀ ಗುರು ಬಸವಣ್ಣನವರ ಪರುಷ ಪಾದದಿಂದ ಭಕ್ತಿಯ ಬೀಡಾಗಿತ್ತು. ಈ ಪವಿತ್ರ ಶರಣ ಭೂಮಿಯು ಇಂದು ನಮಗೆಲ್ಲ ಧರ್ಮಭೂಮಿ (Holy land). ಇಂಥ ಸುಕ್ಷೇತ್ರದಲ್ಲಿ ವರ್ಷಕ್ಕೊಮ್ಮೆಯಾದರೂ ಬಸವ ಭಕ್ತರು ಸಮಾವೇಶವಾಗಬೇಕೆಂದು 2002ನೆಯ ಇಸವಿಯಿಂದಲೂ ಕಲ್ಯಾಣಪರ್ವ ಎಂಬ ವಾರ್ಷಿಕ ಉತ್ಸವವನ್ನು ನಡೆಸಲಾಗುತ್ತಿದೆ. 2013ನೆಯ ಇಸವಿಯಲ್ಲಿ 12ನೆಯ ಕಲ್ಯಾಣ ಪರ್ವವು ಜರುಗಲಿದ್ದು, ಆಶ್ವಯುಜ ಮಾಸದ ತ್ರಯೋದಶಿ, ಚತುರ್ದಶಿ ಮತ್ತು ಹುಣ್ಣಿಮೆ ಯಂದು ಅಕ್ಟೋಬರ್ 16,17 ಮತ್ತು 18ರಂದು ನಡೆಯಲಿದೆ.

ಚನ್ನ(ಬುಧ)ವಾರ ದಿ. 16ರಂದು ಬೆಳಿಗ್ಗೆ 10-30ಕ್ಕೆ ಉದ್ಘಾಟನೆ ಮತ್ತು ಸಾಮೂಹಿಕ ಪ್ರಾರ್ಥನೆ, ಮಧ್ಯಾಹ್ನ 3-30ರಿಂದ 5-30ರವರೆಗೆ ಧಾರ್ಮಿಕ ರಸಪ್ರಶ್ನೆ ; ಸಂಜೆ -6-30ರಿಂದ ಚಿಂತನಗೋಷ್ಠಿ. ದಿ.17 ಪ್ರಭು(ಗುರು) ವಾರದಂದು ಬೆಳಿಗ್ಗೆ 10-30ಕ್ಕೆ ಶರಣ ವಂದನೆ-ಶರಣರಿಗೆ ಶರಣಾರ್ಥಿ, ಮಧ್ಯಾಹ್ನ 3-30ರಿಂದ 5-30ರವರೆಗೆ ಆಶುಭಾಷಣ ಸ್ಪರ್ಧೆ, ಸಂಜೆ 6-30ರಿಂದ

ಚಿಂತನಗೋಷ್ಠಿ. ದಿ.18 ಮಾತ್ಯ(ಶುಕ್ರ)ವಾರದಂದು ಅಕ್ಕನಾಗಲಾಂಬಿಕೆಯ ಪೌರ್ಣಿಮೆಯ ನಿಮಿತ್ತ ಬಸವ ಧರ್ಮ ವಿಜಯೋತ್ಸವ ಕಾರ್ಯಕ್ರಮ ನಂತರ ಅಲ್ಲಮಪ್ರಭು ಶೂನ್ಯಪೀಠಾರೋಹಣ ಮತ್ತು ಸಮಾರೋಪ ಸಮಾರಂಭ ಜರುಗಲಿವೆ.

ಕಲ್ಯಾಣ (ಗಣ) ಪರ್ವಕ್ಕೆ ಧನ ಸಹಾಯ

ಕಲ್ಯಾಣ ಎಂಬುದು ಒಂದು ಸ್ಥಳದ ಹೆಸರು; ಮತ್ತು ವಿಶ್ವಗುರು ಬಸವಣ್ಣನವರ ಧ್ಯೇಯವೇ ಎಲ್ಲ ಮಾನವರ ಲೇಸು -ಕಲ್ಯಾಣ. ಆದರ್ಶ ಕಲ್ಯಾಣ ರಾಜ್ಯ (Welfare state) ನಿರ್ಮಾಣವೇ ಅವರ ಹೋರಾಟದ ಗುರಿಯಾಗಿತ್ತು. ಗಣ ಎಂದರೆ ಸಮೂಹ, ಪರ್ವ ಎಂದರೆ ಹಬ್ಬ, ಶರಣ ಗಣವು ಶರಣ ಭೂಮಿ ಬಸವ ಕಲ್ಯಾಣದಲ್ಲಿ ನೆರೆದು ಆದಿ ಶರಣರ ಜೀವನ-ಸಾಧನೆ-ಸಂದೇಶಗಳನ್ನು ಕೊಂಡಾಡುವ ಹಬ್ಬ ಈ ಕಲ್ಯಾಣ ಪರ್ವ. ಅಂದು ಧರ್ಮಪಿತ ಬಸವಣ್ಣನವರು ಗಣಪರ್ವಗಳನ್ನು ಕಲ್ಯಾಣದಲ್ಲಿ ನಡೆಸುತ್ತಿದ್ದು ಭಕ್ತರು ಅಂಗ, ವಂಗ, ಕಳಿಂಗ, ಗುರ್ಜರ, ಸಿಂಹಳ ಮುಂತಾದ ಭಾಗಗಳಿಂದೆಲ್ಲ ಸಮಾವೇಶವಾಗುತ್ತಿದ್ದುದಾಗಿ ಹರಿಹರ, ಸಿಂಗಿರಾಜ ಮುಂತಾದವರು ತಮ್ಮ ಕಾವ್ಯಗಳಲ್ಲಿ ಬಣ್ಣಿಸುತ್ತಾರೆ. ಅಂಥ ಗಣಪರ್ವವನ್ನು ಇಂದು ನೀವು ನಾವು ಮಾಡಿ ತೋರಿಸಬೇಕಾಗಿದೆ. ಅಕ್ಟೋಬರ್ 15ರ ರಾತ್ರಿಯಿಂದ ಅಕ್ಟೋಬರ್ 19 ರ ಬೆಳಗಿನವರೆಗೆ ಕಲ್ಯಾಣ ಪರ್ವದಲ್ಲಿ ಸಮಾವೇಶವಾಗುವ ಶರಣ ಬಂಧುಗಳಿಗೆ ವಸತಿ ಮತ್ತು ಪ್ರಸಾದದ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಭವ್ಯವಾದ ಸಭಾ ಮಂಟಪ, ಶಾಮಿಯಾನಾ ಕೊಠಡಿಗಳು, ವಿಶಾಲವಾದ ಪ್ರಸಾದ (ಊಟ)ಮಂಟಪ ಮುಂತಾದವುಗಳ ವ್ಯವಸ್ಥೆ ಮಾಡಲು ಅಪಾರವಾದ ಹಣದ ಆವಶ್ಯಕತೆ ಇರುತ್ತದೆ. ದಾನಿಗಳು ಮುಂದೆ ಸೂಚಿಸಿದಂತೆ ಧನ ಸಹಾಯ ಮಾಡಬಹುದು.ಶರಣ ಬಂಧುಗಳು ಒಂದು ಹೊತ್ತಿನ ಪ್ರಸಾದ ದಾಸೋಹದ ವೆಚ್ಚವನ್ನು ಭರಿಸಲೂ ಅವಕಾಶ ಉಂಟು.

1. ಮಹಾಪೋಷಕರು	: 10000 ರೂ. ಮತ್ತು ಮೇಲೆ ಕೊಟ್ಟವರು
2. ಪೋಷಕರು	: 5000 ರೂ. ಮತ್ತು ಮೇಲೆ ಕೊಟ್ಟವರು
3. ದಾನಿಗಳು	: 2000 ರೂ. ಮತ್ತು ಮೇಲೆ ಕೊಟ್ಟವರು
4. ಹಿತೈಷಿಗಳು	: 1000 ರೂ
5. ಸ್ವಾಗತ ಸಮಿತಿ ಸದಸ್ಯತ್ವ	: 500 ರೂ
6. ಪ್ರತಿನಿಧಿ ಶುಲ್ಕ	: 150 ರೂ.

ಅನ್ನದಾಸೋಹಕ್ಕಾಗಿ ಭಕ್ತಿಪೂರ್ವಕ ಕಾಣಿಕೆಗಳನ್ನು ಶಕ್ತ್ಯಾನುಸಾರ ಕೊಡಬಹುದು.

ವಿ.ಸೂ. : ವಾರ್ಷಿಕ ಸಮಾವೇಶವಾದ ಕಲ್ಯಾಣಪರ್ವಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 5000/10000 ರೂಪಾಯಿಗಳ ಪುದುವಟ್ಟು (F.D) ಇಡಲು ದೇಣಿಗೆ ನೀಡಿದರೆ, ಈ ಪುದುವಟ್ಟಿನ ಬಡ್ಡಿಯ ಹಣವನ್ನು ಕಲ್ಯಾಣಪರ್ವದ ದಾಸೋಹಕ್ಕೆ ವಿನಿಯೋಗಿಸಲಾಗುವುದು. ರಸೀತಿ ಪುಸ್ತಕ, ಕರಪತ್ರಗಳನ್ನು ಪಡೆದು ದೇಣಿಗೆ ಸಂಗ್ರಹಿಸುವವರಿಗೂ ಅವಕಾಶವಿದೆ.

ಇನ್‌ಕಮ್ ಟ್ಯಾಕ್ಸದಲ್ಲಿ 80ಜಿ ರಿಯಾಯಿತಿಯ ಸೌಲಭ್ಯವೂ ಇದೆ.

ಸಂಪರ್ಕಿಸುವ ವಿಳಾಸಗಳು

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಬಸವ ಧರ್ಮ ಪೀಠ (ರಿ.)
ಬಸವ ಮಂಟಪ, 2035, 20ನೆಯ ಮುಖ್ಯರಸ್ತೆ,
2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010
☎:080-22923736/9448137508

ಪೂಜ್ಯ ಶ್ರೀ ಜಗದ್ಗುರು ಸಿದ್ಧರಾಮೇಶ್ವರ ಸ್ವಾಮಿಗಳು
ಪೀಠಾಧ್ಯಕ್ಷರು, ಅಲ್ಲಮಪ್ರಭು ಶೂನ್ಯ ಪೀಠ
ಬಸವ ಧರ್ಮ ಪೀಠ (ರಿ.)
ಬಸವ ಮಹಾಮನೆ, ಬಸವ ಕಲ್ಯಾಣ-585 327
ತಾ-ಬಸವಕಲ್ಯಾಣ, ಜಿ-ಬೀದರ್
☎: 08481-252856/9448732456

ಭಾಗ-55 **ಬಸವ ವಚನಾಮೃತ** - ಮಾತಾಜಿ

1246. ದೇವನೇ ಪ್ರೇರಕ

ಎನ್ನಂತರಂಗದೊಳಗೆ ಅರಿವಾಗಿ
ಎನ್ನ ಬಹಿರಂಗದೊಳಗೆ ಆಚಾರವಾಗಿ ನೀನೆಡೆಗೊಂಡು
ಎನ್ನ ಮನದೊಳಗೆ ಘನ ನೆನಹಾಗಿ ಮೂರ್ತಿಗೊಂಡು
ಗುರುಸ್ಥಲ ಲಿಂಗಸ್ಥಲ ಜಂಗಮಸ್ಥಲ ಪ್ರಸಾದಿಸ್ಥಲವೆಂಬ
ಚತುರ್ವಿಧವನೂ ಎನಗೆ ಸ್ವಾಯತವ ಮಾಡಿ ತೋರಿ
ಪ್ರಾಣಲಿಂಗವೆಂಬ ಹಾದಿಯ ಸೆರಗ ತೋರಿಸಿ
ಎಲ್ಲಾ ಅಸಂಖ್ಯಾತರನೂ ಪಾವನವ ಮಾಡಿದಿರಾಗಿ ಲಿಂಗದೇವಾ,
ಎನ್ನಿಂದ ನೀನಾದೆ ಎಂಬುದ
ನಿಮ್ಮ ಪ್ರಮಥರು ಮೆಚ್ಚರು ನೋಡಯ್ಯಾ.

ಇದೊಂದು ಅತ್ಯಂತ ಮಹತ್ವಪೂರ್ಣ ವಚನ. ಇಷ್ಟಲಿಂಗವು ಗುರು ಬಸವಣ್ಣನವರಿಂದಲೇ ರೂಪುಗೊಂಡದ್ದು ಎಂಬುದಕ್ಕೆ ಸಾಕ್ಷಿಯಾಗುತ್ತದೆ. ಗುರು ಬಸವಣ್ಣನವರಿಗೆ ದೇವರೇ ಗುರು ಮತ್ತು ಪ್ರೇರಕ ಎಂಬುದನ್ನು ಸ್ಪಷ್ಟೀಕರಿಸುತ್ತದೆ.

ಲಿಂಗದೇವಾ, ಎನ್ನಂತರಂಗದಲ್ಲಿ ಅರಿವಾಗಿ (**intuition**) ಸ್ಫುರಿಸಿದಿರಿ, ಬಹಿರಂಗದಲ್ಲಿ ಆಚಾರವಾಗಿ ನೆಲೆಗೊಂಡಿರಿ. ನನ್ನ ಮನಸ್ಸಿನೊಳಗೆ ನಿಮ್ಮ ನೆನಹಾಗಿ ಮೂರ್ತಿಗೊಂಡಿರಿ. ಗುರು-ಲಿಂಗ-ಜಂಗಮ-ಪ್ರಸಾದ ಎಂಬ ಚತುರ್ವಿಧ ತತ್ತ್ವಗಳ ಪರಿಕಲ್ಪನೆ (**concept**)ಯನ್ನು ನನಗೆ ಕರುಣಿಸಿದಿರಿ. ಬಹಿರಂಗದ ಇಷ್ಟಲಿಂಗದಿಂದ ಅಂತರಂಗದ ಪ್ರಾಣಲಿಂಗವನ್ನು ಹೇಗೆ ಕಾಣಬಹುದು ಎಂಬುದನ್ನು ಮನವರಿಕೆ ಮಾಡಿಕೊಟ್ಟಿರಿ. ಇಷ್ಟಲಿಂಗವನ್ನು ಧರಿಸಿ ಈ ಧರ್ಮವನ್ನು ಸ್ವೀಕರಿಸಿದ ಎಲ್ಲ ಅಸಂಖ್ಯಾತರನ್ನೂ ಪಾವನವ ಮಾಡಿದಿರಿ. ನಿಮ್ಮ ಅನುಗ್ರಹದಿಂದ, ಪ್ರೇರಣೆಯಿಂದ ನಾನು ಸಕಲ ಸನ್ಮತವ ಅರಿದೆನು. ಹೀಗಿರುವಾಗ ನನ್ನಿಂದ ನೀನು (ಇಷ್ಟಲಿಂಗ)ಆದೆ ಎಂದು ಅನೇಕರು ಹೇಳುವರು. ಇದನ್ನು ನಿಮ್ಮ ಪ್ರಮಥರು ಮೆಚ್ಚರು. ನಾನೂ ಇಷ್ಟಪಡುವುದಿಲ್ಲ. ನಾನು ಇಷ್ಟೆಲ್ಲ ಮಾಡಲು ನಿನ್ನ ಪ್ರೇರಣೆಯೇ ಕಾರಣವಲ್ಲವೆ ?

1247. ಮಡಿವಾಳ ಮಾಚಿದೇವರ ಹಿರಿಮೆ

ಎನ್ನ ಕಾಯವ ಶುದ್ಧವ ಮಾಡಿದಾತ ಮಡಿವಾಳ
ಎನ್ನ ಮನವ ನಿರ್ಮಳವ ಮಾಡಿದಾತ ಮಡಿವಾಳ
ಎನ್ನಂತರಂಗವ ಬೆಳಗಿದಾತ ಮಡಿವಾಳ;
ಎನ್ನ ಬಹಿರಂಗವ ಬಿಡಿಸಿದಾಗ ಮಡಿವಾಳ, ಲಿಂಗದೇವಾ,
ಎನ್ನ ನಿಮಗೆ ಯೋಗ್ಯನ ಮಾಡಿದಾತ ಮಡಿವಾಳ !

ಮಡಿವಾಳ ಮಾಚಿದೇವರ ಪಾತ್ರ ಗುರು ಬಸವಣ್ಣನವರ ಜೀವನದಲ್ಲಿ ವೈಯಕ್ತಿಕವಾಗಿ, ಧಾರ್ಮಿಕವಾಗಿ, ಸಾಮಾಜಿಕವಾಗಿ ಬಹಳ ಮಹತ್ವಪೂರ್ಣವಾದುದು. ಗುರು ಬಸವಣ್ಣನವರು ಎಲ್ಲ ದೃಷ್ಟಿಯಿಂದಲೂ ಉನ್ನತ ಮಟ್ಟದಲ್ಲಿ ಇದ್ದುದರಿಂದ ಅವರೊಡನೆ ಮಾತನಾಡಲು ಉಳಿದ ಶರಣರು ಸಂಕೋಚಪಡುತ್ತಿದ್ದರು. ಮಡಿವಾಳ ಮಾಚಿದೇವರದು ನಿರ್ಭಿಡೆಯ ಸ್ವಭಾವ, ಮುಚ್ಚುಮರೆಯಿಲ್ಲದೆ ಮಾತನಾಡಬಲ್ಲವರು. ಹೀಗಾಗಿ ಗುರು ಬಸವಣ್ಣನವರೊಡನೆ ಸಲುಗೆಯಿಂದ ಮಾತನಾಡಲು ಅವರು ಸಮರ್ಥರು. ಅವರು ತಮ್ಮ ಪ್ರಾಣಕ್ಕಿಂತಲೂ ಹೆಚ್ಚು ಬಸವಣ್ಣನವರನ್ನು ಪ್ರೀತಿಸುತ್ತಿದ್ದರು, ಆರಾಧಿಸುತ್ತಿದ್ದರು. ಗುರು ಬಸವಣ್ಣನವರು ಮಡಿವಾಳ ಮಾಚಿದೇವರಲ್ಲಿ ಅಪಾರ ಪ್ರೀತಿಯನ್ನು, ವಿಶ್ವಾಸವನ್ನು ಇಟ್ಟಿದ್ದರು. ಅನೇಕ ವಿಷಯಗಳನ್ನು ನಿರ್ಣಯಿಸುವಲ್ಲಿ ಮಡಿವಾಳ ಮಾಚಿದೇವರ ಪಾತ್ರ ಹಿರಿದಾಗಿತ್ತು. ಈ ಹಿನ್ನೆಲೆಯಲ್ಲಿ ಕೆಳಗಿನ ಮಾತುಗಳನ್ನು ಹೇಳಿದ್ದಾರೆ.

ಕಾಯವನ್ನು ಶುದ್ಧ ಮಾಡಿದಾತ, ಮನವನ್ನು ನಿರ್ಮಲ ಮಾಡಿದಾತ, ಅಂತರಂಗವ ಬೆಳಗಿದಾತ, ಬಹಿರಂಗವ ಬಿಡಿಸಿದಾತ, ಮಡಿವಾಳ ಮಾಚಿದೇವ. ಮಾತ್ರವಲ್ಲ, "ಲಿಂಗದೇವಾ, ನಿಮಗೆ ಯೋಗ್ಯನ ಮಾಡಿದಾತ ಮಡಿವಾಳ" ಎಂಬುವಷ್ಟರ ಮಟ್ಟಿಗೆ ಮಾಚಿದೇವರನ್ನು ಕೊಂಡಾಡುತ್ತಾರೆ.

1248. ಶರಣನ ಅನುಭಾವದ ನಿಲುವು

ಅರಿವು ಮರವೆಯೊಳಡಗಿ, ಮರವೆ ಅರಿವಿನೊಳಡಗಿ,
ತೆರಹಿಲ್ಲದಿರ್ದನೆಂಬ ಹಮ್ಮಿದೇನೋ, ಹಮ್ಮಿದೇನೋ?
ಬ್ರಹ್ಮ ಬ್ರಹ್ಮವ ನುಂಗಿ, ಮತ್ತಾ ಪರಬ್ರಹ್ಮನು ತಾನೆಂದೆಂಬ
ಹಮ್ಮಿದೇನೋ ಹಮ್ಮಿದೇನೋ?
ಆದಿ ಶೂನ್ಯವು ಶೂನ್ಯ, ಮಧ್ಯ ಶೂನ್ಯವು ಶೂನ್ಯ
ಅಂತ್ಯ ಶೂನ್ಯವು ಶೂನ್ಯ
ಶೂನ್ಯವಾದ ಬಳಿಕ ಅಲ್ಲಿಂದತ್ತ
ನಿಂದ ನಿಲವನಾರು ಬಲ್ಲರು ಹೇಳಾ ?
ಬಯಲು ಚಿತ್ರಿಸಿದ ಚಿತ್ರವನಾ ಬಯಲರಿಯದಂತೆ
ಲಿಂಗದೇವಾ, ನಿಮ್ಮ ಶರಣರ ನಿಲವು.

ಅರಿವು ಅಂದರೆ ಪ್ರಜ್ಞೆ(**Consciousness**) ಮರವೆಯಲ್ಲಿ ಅಡಗುತ್ತದೆ. ಇಲ್ಲಿ ಮರವೆ ಎಂದರೆ ಅಜ್ಞಾನ(**Ignorance**) ಅಲ್ಲ ತನ್ಮಯತೆಯ ಸ್ಥಿತಿ. ಚಿದ್ವಸ್ತುವಿನಿಂದ ತಾನು ಬೇರೆಯಲ್ಲ. ಲಿಂಗ ಅಂಗಗಳೆರಡೂ ತೆರಹಿಲ್ಲದಂತೆ, ಬೇರೆಯಾಗದಂತೆ ಇವೆ ಎಂಬ ಹಮ್ಮು-ಅಭಿಮಾನ ಅಳವಡುವುದು. ಆತ್ಮನೆಂಬ ಬ್ರಹ್ಮದ ಅಂಶ ಪರಮಾತ್ಮನೆಂಬ ಬ್ರಹ್ಮದಲ್ಲಿ ಕರಗಿ ಮತ್ತೆ ಆ ಪರಬ್ರಹ್ಮನೆ ತಾನೆಂಬ ಪ್ರಜ್ಞೆ ಅಳವಡುವುದು. ಶೂನ್ಯ ಸ್ವರೂಪನಾದ ದೇವನನ್ನು ಧ್ಯಾನಿಸಲು ಶರಣನು ತೊಡಗುವನು. ಧ್ಯಾನವು ಮುಂದೆ ಸಾಗುವುದು. ಅಂತಿಮವಾಗಿ ಶೂನ್ಯದಲ್ಲಿ ಪರ್ಯವಸಾನ ಹೊಂದುವುದು. ಅಲ್ಲಿಂದತ್ತ ಅನುಭವವನ್ನು ಹೇಳಲು ಶರಣನಿಗೆ ಸಾಧ್ಯವಿರುವುದಿಲ್ಲ. ಬಯಲಿನಲ್ಲಿ ಮೋಡಗಳು ಬಹು ಬಗೆಯ ಚಿತ್ತಾರವನ್ನು ಬಿಡಿಸುತ್ತವೆ. ಅದನ್ನು ಬಯಲಾಗಲೀ, ಮೋಡವಾಗಲೀ ಅರಿಯವು. ಹಾಗೆ ಶರಣನು ದಿವ್ಯಾನುಭವದಲ್ಲಿ ತನ್ಮಯನಾಗುವನು. ಅವನ ಚಿತ್ತ ಭಿತ್ತಿಯ ಮೇಲೆ ಅನುಭವದ ಸಮುಚ್ಚಯ ಹಾಯ್ದು ಹೋಗುವುದು.

1249. ಚನ್ನಯ್ಯನ ಮಕ್ಕಳು

ಲೋಕಾದಿ ಲೋಕಂಗಳೆಲ್ಲ ಚನ್ನಯ್ಯನ ಮಕ್ಕಳು
ಬ್ರಹ್ಮ ವಿಷ್ಣು ರುದ್ರರೆಲ್ಲಾ ಚನ್ನಯ್ಯನ ಮಕ್ಕಳು
ಸನಕ ಸನಂದ ಸನಾದಿಗಳೆಲ್ಲಾ ಚನ್ನಯ್ಯನ ಮಕ್ಕಳು
ಗರುಡ ಗಂಧರ್ವರೆಲ್ಲಾ ಚನ್ನಯ್ಯನ ಮಕ್ಕಳು
ಸಿದ್ಧ ವಿದ್ಯಾಧರರುಗಳೆಲ್ಲಾ ಚನ್ನಯ್ಯನ ಮಕ್ಕಳು
ಏಕಾದಶ ರುದ್ರರು ದ್ವಾದಶಾದಿತ್ಯರು ಚನ್ನಯ್ಯನ ಮಕ್ಕಳು
ನವಬ್ರಹ್ಮರು ಚನ್ನಯ್ಯನ ಮಕ್ಕಳು
ತೆತ್ತೀಂಶ ಕೋಟಿ ದೇವತೆಗಳೆಲ್ಲಾ ಚನ್ನಯ್ಯನ ಮಕ್ಕಳು
ಭಾವ ಭಾಳೇಕ್ಷಣರೆಲ್ಲಾ ಚನ್ನಯ್ಯನ ಮಕ್ಕಳು
ನನ್ನ ನಿನ್ನಂತಹವರೆಲ್ಲಾ ಚನ್ನಯ್ಯನ ಮಕ್ಕಳು
ಆಣೆ, ನಿಮ್ಮಾಣೆ, ಲಿಂಗದೇವಾ.

ಮಾದಾರ ಚನ್ನಯ್ಯನು ಅಪ್ರತಿಮ ಸಾಧಕ. ಶಿವನಿಗೆ ಊಟ ಮಾಡಿಸಿದವನು. ಅವನ

ಸಾಧನೆಯನ್ನು ಬ್ರಹ್ಮ ವಿಷ್ಣು ರುದ್ರರಾಗಲಿ, ಮೂವತ್ಮೂರು ಕೋಟಿ ದೇವತೆಗಳಾಗಲೀ ಮಾಡಿಲ್ಲ. ಹೀಗಾಗಿ ಅವರೆಲ್ಲ ಚನ್ನಯ್ಯನ ಮುಂದೆ ಕಿರಿಯರೆ ಸರಿ.

1250. ಆಶ್ಚರ್ಯದ ನಿಲುವು

ದೇವರ ದೇವಾ, ಮಲಯಜದಿಂದ ಮೇಲೆ ಮಲಯಜವುಂಟೆ ?
ಪರುಷದಿಂದ ಮೇಲೆ ಪರುಷವಾವುದುಂಟು ?
ಅಯ್ಯಾ ಅಮೃತಾಹಾರದಿಂದ
ಮೇಲೆ ಭೋಜನವಾವುದುಂಟು?
ಅಯ್ಯಾ, ನಿಮ್ಮಿಂದೊಂದಾಶ್ಚರ್ಯವ ಕಂಡೆನೆಂಬುದ
ಎನಗೆ ನಿರುಪಿಸಾ ಲಿಂಗದೇವ, ಪ್ರಭುವೆ.

ಮಲಯ ಪರ್ವತ ಒಂದು ಎತ್ತರವಾದ ಬೆಟ್ಟ. ಅಲ್ಲಿ ಹುಟ್ಟುವ ಹೆಮ್ಮರಗಳು ಮುಗಿಲು ಮುಟ್ಟುವಂತಹವು. ಅವನ್ನು ಮೀರಿಸುವ ಎತ್ತರಕ್ಕೆ ಇನ್ನೇನು ಇರಬಲ್ಲುವು. ಪರುಷವು ಕಬ್ಬಿಣವನ್ನು ಬಂಗಾರವನ್ನಾಗಿ ಪರಿವರ್ತಿಸುವುದು. ಅದನ್ನು ಮೀರಿಸುವ ಇನ್ನೊಂದು ವಸ್ತುವಿರದು. ಹಾಗೆ ಅಮೃತಾಹಾರಕ್ಕೆ ಮಿಗಿಲಾದ ಬೇರೆ ಊಟವಿರುವುದೇ ? ಇಲ್ಲಿ ನಮ್ಮಿಂದ ಒಂದು ಆಶ್ಚರ್ಯವ ಕಂಡೆ ಎಂದು ಹೇಳುತ್ತಿರುವಿರಿ. ಪ್ರಭುವೇ, ಅದನ್ನು ಬಿಚ್ಚುಭಾಷೆಯಲ್ಲಿ ಹೇಳಿರಿ.

1251. ದೇವನಲ್ಲಿ ಶರಣಾಗತಿ

ದೇವ ದೇವಾ, ಮಹಾ ಪ್ರಸಾದ !
ನೀವೆಂದಂತೆ ನಿಮ್ಮ ಚರಣದಲ್ಲಿ ಸಂದು ಭೇದವಿಲ್ಲದೆ ಇಪ್ಪೆನಲ್ಲದೆ
ಬೇರೆ ಭೀನ್ನವಾಗಿರ್ದೆನಾದಡೆ ನೀವೇ ಸಾಕ್ಷಿ.
ನಿಮ್ಮ ಶ್ರೀಪಾದವ ಕಂಡೆನ್ನ ಭವಂ ನಾಸ್ತಿಯಾಯಿತ್ತು.
ಲಿಂಗದೇವಾ.

ಲಿಂಗದೇವಾ ನಿಮ್ಮ ಅನುಗ್ರಹವಿರಲಿ, ನಿಮ್ಮ ಚರಣದಲ್ಲಿ ಶರಣಾಗತನಾಗಿ ಯಾವುದೇ ಸಂದು ಭೇದವಿಲ್ಲದೆ ಇರುತ್ತೇನಲ್ಲದೆ ಬೇರೆ ಅನ್ಯಭಾವವನ್ನು ಹೊಂದುವುದಿಲ್ಲ. ನಿಮ್ಮ ಶ್ರೀ ಪಾದದ ದರ್ಶನದಿಂದ ನಾನು ಭವವನ್ನು ಗೆಲ್ಲಬಲ್ಲವನಾದೆ.

1252. ಆಶ್ಚರ್ಯದ ನಿಲುವು

ನಿಮ್ಮಿಂದೊಂದಾಶ್ಚರ್ಯವಿಲ್ಲವೆಂದು ಶ್ರುತಿಗಳು ಹೊಗಳುತ್ತಿರಲಾಗಿ
ನೀವು ಕಂಡ ಆಶ್ಚರ್ಯವಾವುದೆನಗೊಮ್ಮೆ ನಿರೂಪಿಸಾ ಪ್ರಭುವೆ.
ಲಿಂಗದೇವಾ.

ಮಹಾಮನೆಗೆ ಆಗಮಿಸಿದ ಅಲ್ಲಮಪ್ರಭು ಸಿದ್ಧರಾಮೇಶ್ವರರನ್ನು ಕರೆದುಕೊಂಡು ಮಹಾಮನೆಯ ವಿವಿಧ ಭಾಗಗಳನ್ನು ತೋರಿಸುತ್ತ ಪ್ರಸಾದ ನಿಲಯಕ್ಕೆ ಗುರು ಬಸವಣ್ಣನವರು ಬರುತ್ತಾರೆ. ದಾಸೋಹ ನಿಲಯದ ಒಂದು ಭಾಗದಲ್ಲಿ ತಟ್ಟೆಗಳನ್ನು ತೊಳೆಯುವ ಬಚ್ಚಲು ಇರುತ್ತದೆ. ಅಲ್ಲಿಗೆ ಬಂದು, ತಟ್ಟೆ ತೊಳೆಯುತ್ತಿರುವ ಓರ್ವ ವ್ಯಕ್ತಿಯನ್ನು ಕಂಡು ಅಲ್ಲಮ ಪ್ರಭುಗಳು ಗಕ್ಕನೆ ನಿಂತುಬಿಡುತ್ತಾರೆ. "ಬಸವಣ್ಣಾ ನಿನ್ನ ಮಹಾಮನೆಯಲ್ಲಿ ಅನರ್ಘ್ಯ ರತ್ನವೊಂದನ್ನು ಕಂಡೆ" ಎನ್ನುತ್ತಾರೆ. ಆಗ ಗುರು ಬಸವಣ್ಣನವರು ಕೇಳುತ್ತಾರೆ, ನಿಮ್ಮ ವ್ಯಕ್ತಿತ್ವವು ಅಪೂರ್ವ. ನಿಮ್ಮ ಸಾಧನೆ ಅನುಪಮ. ಹೀಗಿರುವಾಗ ನೀವು ಮತ್ತೊಂದು ಆಶ್ಚರ್ಯವನ್ನು ಕಂಡೆ ಎನ್ನುತ್ತಿರುವಿರಿ. ಅದು ಯಾವುದು ಎಂಬುದನ್ನು ನಿರೂಪಿಸಿರಿ ಪ್ರಭುವೆ." ಆಗ ಪ್ರಭುದೇವರು ಪ್ರಸಾದ ಕುಂಡದ ಬಳಿ ಕುಳಿತು ಶರಣರು ಊಟ ಮಾಡಿದ ತಟ್ಟೆಗಳನ್ನು ಮೌನವಾಗಿ ತೊಳೆಯುತ್ತಿರುವ ಮರುಳು ಶಂಕರದೇವ ಎಂಬ ಶರಣನನ್ನು ತೋರಿಸಿ "ಈತ ಅಸಾಮಾನ್ಯ ಸಾಧಕ, ಸಿದ್ಧಪುರುಷ" ಎಂದು ಬಣ್ಣಿಸುವರು. ಆಗ ಆಶ್ಚರ್ಯ ಆನಂದಗಳಿಂದ ಪುಳಕಿತರಾದ ಗುರು ಬಸವಣ್ಣನವರು ಹೇಳುವರು;

1253. ಶಬ್ದಮುಗ್ಧ ಶರಣ.

ಏನೆಂದುಪಮಿಸುವೆನಯ್ಯಾ ?
ತನ್ನಿಂದ ತಾ ತೋರದೆ ಗುರುಮುಖದಿಂದ ತೋರಿದ
ತನ್ನ ನಿಲವ ನಿರುಪಮನು
ಶಬ್ದಮುಗ್ಧವಾಗಿಯಿದ್ದೆಡೆಯನಿದಿರಿಂಗೆ ತೋರದೆ
ಇರವೆ ಪರವಾಗಿರ್ದ ಅಜಡನು
ಇನನುದಯಕಾಲಕ್ಕೆ ಕುಕ್ಕುಟ ಧ್ವನಿದೋರುವಂತೆ
ಘನಮಹಿಮರ ದರ್ಶನದಿಂದ ಸತ್ಪ್ರಣವವ
ತಾನಾಗಿ ನುಡಿದ ಮೂಲಿಗನು. ಲಿಂಗದೇವರಲ್ಲಿ
ಬೆರಸಿ ಬೇರಿಲ್ಲದಿಪ್ಪ ಮರುಳುಶಂಕರದೇವರ ನಿಲವ
ಪ್ರಭುದೇವರು ಸಿದ್ಧರಾಮಯ್ಯದೇವರು ಹಡಪದಪ್ಪಣ್ಣನಿಂದ ಕಂಡು
ಎನ್ನ ಜನ್ಮ ಸಫಲವಾಯಿತ್ತಯ್ಯಾ.

ಏನು ಉಪಮೆಯನ್ನು ಕೊಟ್ಟು ವರ್ಣಿಸಲು ಸಾಧ್ಯ? ತನ್ನ ವ್ಯಕ್ತಿತ್ವವನ್ನು ತಾನೇ ತೋರಿಸಿಕೊಳ್ಳದೆ ಗುರುವಿನ ಮುಖದಿಂದ ತೋರಿಸಿಕೊಂಡ. ದೀರ್ಘ ಕಾಲದಿಂದಲೂ ಶಬ್ದಮುಗ್ಧನಾಗಿ ಅಖಂಡ ಮೌನಿಯಾಗಿ ಇದ್ದುಕೊಂಡು ತನ್ನ ಇರುವಿಕೆಯನ್ನೇ ದೈವೀಮಯವಾಗಿ ಮಾಡಿಕೊಂಡ ಚೈತನ್ಯ ಸ್ವರೂಪನು. ಸೂರ್ಯನ ಉದಯ ಕಾಲಕ್ಕೆ ಕೋಳಿಯು ಕೂಗುವಂತೆ ಘನ ಮಹಿಮ ಪ್ರಭುದೇವರ ದರ್ಶನದಿಂದ ಓಂಕಾರವ(ಸತ್ಪ್ರಣವವ) ತಾನಾಗಿ ನುಡಿದ ಮಹಿಮಾತ್ಮನು –ಲಿಂಗದೇವನಲ್ಲಿ ತಾದಾತ್ಮ್ಯ ಹೊಂದಿ ನಿಂತಿರುವ ಮರುಳು ಶಂಕರ ದೇವರೆಂಬ ಮಹಾತ್ಮನ ನಿಲುವನ್ನು ಪ್ರಭುದೇವರು, ಸಿದ್ಧರಾಮಯ್ಯ ದೇವರು, ಹಡಪದ ಅಪ್ಪಣ್ಣನವರ ಮೂಲಕ ಕಂಡು ನನ್ನ ಜನ್ಮ ಸಫಲವಾಯಿತು. ಇಂದು ಅವರನ್ನು ಅರಿಯಬಲ್ಲವನಾದೆ.

1254. ಆರೂಢದ ನಿಲುವು

ಸತ್ಯಮುಕ್ತಿಯ ಕಳೆಯ ನೋಡಾ.
ನಿತ್ಯತತ್ತ್ವದ ಇರವ ನೋಡಾ
ಮೂರೊಂದಾದ ಆರೂಢ ನೋಡಾ
ಲಿಂಗದೇವರಲ್ಲಿ ತದ್ಗತವಾಗಿಪ್ಪ
ಮರುಳುಶಂಕರದೇವರ ನಿಲವ
ಪ್ರಭುಸಿದ್ಧರಾಮಯ್ಯದೇವರಿಂದ ಕಂಡು ಬದುಕಿದೆನು.

ಜೀವನ್ಮುಕ್ತ ಸ್ಥಿತಿಯನ್ನು ಪಡೆದ ಕಳಾಯುಕ್ತನೀತ. ನಿತ್ಯ ತತ್ತ್ವವಾದ ಪರಮಾತ್ಮನ ಸಾಕಾರನೀತ. ಇಷ್ಟ, ಪ್ರಾಣ, ಭಾವಲಿಂಗಗಳನ್ನು ಸಾಕ್ಷಾತ್ಕಾರಿಸಿಕೊಂಡ ಆರೂಢ. ಲಿಂಗದೇವರಲ್ಲಿ ಸಮರಸವಾಗಿರುವ ಭಾವೈಕ್ಯ ಸ್ಥಿತಿಯನ್ನು ಪಡೆದ ಪರಮ ಪುನೀತ ಈತ. ಇಂಥ ಮರುಳುಶಂಕರ ದೇವರ ವ್ಯಕ್ತಿತ್ವವನ್ನು ಪ್ರಭುದೇವರು, ಸಿದ್ಧರಾಮಯ್ಯನವರಿಂದ ತಿಳಿದು ನಾನು ಬದುಕಿದೆನು.

1255. ಮಡಿವಾಳಯ್ಯಗಳ ಹಿರಿಮೆ

ಅಡಿಗಡಿಗೆನ್ನ ವಚನ ರಚನೆಯ ಮೆಚ್ಚ.
ಅಡಿಗಡಿಗೆನ್ನ ಮನದ ಮೈಲಿಗೆಯ ತೊಳೆದ
ಹೋದ ಪ್ರಾಣವ ಮರಳಿ ತಂದು ರಕ್ಷಿಸಿದ
ಲಿಂಗದೇವಯ್ಯಾ, ಮಡಿವಾಳಯ್ಯಗಳ ಕರುಣದಿಂದ
ಮರುಳುಶಂಕರದೇವರ ನಿಲವ ಕಂಡು ಬದುಕಿದೆನು

ಕಾಣಾ ಕಿನ್ನರಿ ಬ್ರಹ್ಮಯ್ಯಾ.

"ನಾನು ರಚಿಸುವ ವಚನಗಳಲ್ಲಿರುವ ಲೋಪ ದೋಷಗಳನ್ನು ಎತ್ತಿ ತೋರಿಸುವನು. ಹೆಜ್ಜೆ ಹೆಜ್ಜೆಗೂ ನನ್ನ ಮನಸ್ಸಿನ ಮೈಲಿಗೆಯ ತೊಳೆವನು. ಜಂಗಮ ಪ್ರಾಣಿಯಾದ ನನ್ನ ಜೀವವು ಬಂದ ಆಗಂತುಕನ ಹಿಂದೆ ಹೋಗಿದ್ದಾಗ, ಕಾರಣವನ್ನು ಊಹಿಸಿ, ಅವನನ್ನು ಹುಡುಕಿ ಕರೆತಂದು ನನ್ನ ಪ್ರಾಣವನ್ನು ಮರಳಿ ತಂದು ನನ್ನನ್ನು ರಕ್ಷಿಸಿದ. ಇಂಥ ಮಡಿವಾಳಯ್ಯಗಳ ಕರುಣದಿಂದ ಮರುಳುಶಂಕರದೇವರ ನಿಲುವ ಕಂಡು ನಾನು ಬದುಕಿದೆನು ಕಾಣಾ ಕಿನ್ನರಿ ಬ್ರಹ್ಮಯ್ಯಾ" (ಜಂಗಮ ಪ್ರಾಣಿ ಬಸವಣ್ಣ-ಒಮ್ಮೆ ಗುರು ಬಸವಣ್ಣನವರ ದರ್ಶನಕ್ಕೆಂದು ಆಗಂತುಕನೊಬ್ಬ ಬರುತ್ತಾನೆ. ಗುರುದೇವರು ವಿಶ್ರಾಂತಿ ಯಲ್ಲಿದ್ದಾರೆಂದು ಅವನನ್ನು ಸೇವಕನು ವಾಪಸ್ಸು ಕಳಿಸುವನು. ಗುರುದೇವರ ಸೂಕ್ಷ್ಮ ಶರೀರವು-ಪ್ರಾಣಸಹಿತವಾಗಿ ಅವನ ಹಿಂದೆಯೇ ಹೋಗುವುದು. ಎಷ್ಟು ಹೊತ್ತಾದರೂ ಅವರು ಏಳದಿರುವುದನ್ನು ಕಂಡು ಎಬ್ಬಿಸಲು ಬಂದ ತಾಯಿ ನೀಲಾಂಬಿಕೆ ಗಾಬರಿಯಾಗಿರುವಾಗ ಬಹುಶಃ ಮಡಿವಾಳ ಮಾಚಿದೇವರು ಕಾರಣವನ್ನು ಊಹಿಸಿ ಆಗಂತುಕನನ್ನು ಕರೆತಂದು ಆತ್ಮವು ಗುರುಬಸವಣ್ಣನವರಲ್ಲಿ ಪ್ರವೇಶ ಮಾಡುವಂತೆ ಮಾಡಿದ್ದಾರೆ. ಇದರಿಂದಾಗಿ ಗುರು ಬಸವಣ್ಣನವರಿಗೆ ಜಂಗಮಪ್ರಾಣಿ ಎಂಬ ಬಿರುದು ಬಂದಿದೆ.) ಎಂದು ಕಿನ್ನರಿಬ್ರಹ್ಮಯ್ಯನವರಿಗೆ ಹೇಳುತ್ತಾರೆ.

1256. ಅಂಗಮನಭಾವಗಳು ಪಕ್ವವಾದ ನಿಲುವು

ನಾನಾ ಯುಗಂಗಳಲ್ಲಿ ಬಂದಲ್ಲಿ
ಇಂತಪ್ಪ ನಿಲವ ಕಂಡುದಿಲ್ಲವಯ್ಯಾ
ಅಂಗ ಮನ ಭಾವ ಕರಣಂಗಳು ಮಾದು
ಲಿಂಗದೇವರ ನಿಲವನೊಳಕೊಂಡ
ಮರುಳುಶಂಕರದೇವರ ನಿಲವ ನಿಮ್ಮಿಂದ ಕಂಡು
ಬದುಕಿದೆನು ಕಾಣಾ, ಕಿನ್ನರಿ ಬ್ರಹ್ಮಯ್ಯಾ

ಹಲವಾರು ಯುಗಗಳಲ್ಲಿ ಹುಡುಕಿದರೂ ಇಂತಹ ಸಾಧನೆ ಹಾಗೂ ವ್ಯಕ್ತಿತ್ವವುಳ್ಳ ವ್ಯಕ್ತಿ ಸಿಗುವುದಿಲ್ಲ. ಶರೀರ ಮನಸ್ಸು ಭಾವಗಳು ಪಕ್ವಗೊಂಡಿವೆ. ಲಿಂಗದೇವನನ್ನು ಸರ್ವಾಂಗದಲ್ಲೂ ತುಂಬಿಕೊಂಡ ಮರುಳು ಶಂಕರದೇವರ ನಿಲುವನ್ನು ಇಂದು ನಿಮ್ಮ ಮೂಲಕ ಅರ್ಥಮಾಡಿಕೊಂಡೆ ಕಿನ್ನರಿ ಬೊಮ್ಮಣ್ಣ.

1257. ನಿಬ್ಬೆರಗಿನ ಮೂರ್ತಿ

ಕಂಗಳೊಳಗೆ ಕರುಳಿಲ್ಲ. ಕಾಯದೊಳಗೆ ಮಾಯವಿಲ್ಲ
ಮನದೊಳಗೆ ಅಹಂಕಾರವಿಲ್ಲ
ದೇಹಿಯೆಂದರಿಯೆ ನಿರ್ದೇಹಿಯೆಂದರಿಯೆ.
ಜಂತ್ರದ ಸೂತ್ರದಂತೆ ಇಪ್ಪ ನಿಬ್ಬೆರಗಿನ ಮೂರ್ತಿಯ ನೋಡಾ
ಲಿಂಗ ಜಂಗಮದ ಒಕ್ಕ ಮಿಕ್ಕ ಪ್ರಸಾದವ ಕೊಂಡು
ಮಿಕ್ಕು ಮೀರಿ ನಿಂದ ಮಹಾಪ್ರಸಾದಿಯ ನೋಡಾ
ತನ್ನನರಿದಹರೆಂದು ಜಗದ ಕಣ್ಣಿಂಗೆ ಮಾಯದ ಮಂಜು ಕವಿಸಿ
ನಿಜಪದದಲ್ಲಿ ತದುಗತನಾದನು.
ಲಿಂಗದೇವರಲ್ಲಿ ಮರುಳುಶಂಕರದೇವರ
ನಿಲವ ನೋಡಾ, ಚನ್ನಬಸವಣ್ಣಾ.

ಕಣ್ಣಿನೊಳಗೆ ಯಾವುದೇ ರಾಗ-ದ್ವೇಷ, ಮಮಕಾರ-ಮೋಹ, ಭಾವನೆಗಳು ಇಲ್ಲದ ಸ್ಥಿತಿ ಹೊಂದಿದ್ದಾನೆ. ಶರೀರದ ಕ್ರಿಯೆಗಳಲ್ಲಿ ಯಾವುದೇ ಮಾಯೆಯಿಲ್ಲ. ತಾನು ಇಂತಹ ಅದ್ಭುತ ಆಧ್ಯಾತ್ಮಿಕ ಸ್ಥಿತಿ ಪಡೆದಿದ್ದೇನೆ ಎಂಬ ಅಹಂಕಾರವಿಲ್ಲ. ಕೃಶವಾಗಿರುವ ದೇಹವನ್ನು ನೋಡಿದರೆ ಈತನಿಗೆ ದೇಹವು ಇದೆಯೋ ಇಲ್ಲವೋ ಎನ್ನಿಸುವುದು. ಆದರೆ ದೇಹವೊಂದು ಇರುವ ಕಾರಣ ದೇಹಿ ಎನ್ನಲೇ ಬೇಕಾಗುವುದು. ಈತನನ್ನು ನೋಡಿದರೆ ದೇವನ ಕೈಯೊಳಗಣ ಸೂತ್ರದ ತೆರದಲ್ಲಿ ಇರುವನು. ಈತ ಸದಾ ನಿಬ್ಬೆರಗಿನ ಮೂರ್ತಿಯಾಗಿ ಇರುವುದಲ್ಲದೆ ಬೇರೆಯವರಲ್ಲೂ ಆತನನ್ನು ಕಂಡು ನಿಬ್ಬೆರಗು ಉಂಟಾಗುವಂತೆ ಮಾಡುತ್ತಾನೆ. ಪ್ರತಿನಿತ್ಯ ಲಿಂಗಪ್ರಸಾದ ಮತ್ತು ಜಂಗಮ ಪ್ರಸಾದವನ್ನು ಉಂಡು ಮಿಕ್ಕು ಮೀರಿನಿಂದ ಮಹಾಪ್ರಸಾದಿಯಾಗಿದ್ದಾನೆ. ತನ್ನನ್ನು ಯಾರೂ ಗುರುತಿಸಬಾರದೆಂದು ಜಗದ ಕಣ್ಣಿಗೆ ಮಾಯೆಯ ಮಂಜು ಕವಿಸಿ, ಸಾಮಾನ್ಯನಂತೆ ಕಾಣುತ್ತ ನಿಜಪದದಲ್ಲಿ ತದ್ಗತನಾಗಿದ್ದಾನೆ. ಚನ್ನಬಸವಣ್ಣಾ, ಲಿಂಗದೇವರಲ್ಲಿ ಮರುಳು ಶಂಕರದೇವರ ನಿಲುವನ್ನು ನೋಡು.

1258. ಹಿತರಕ್ಷಕನಾರು ?

ಮಾರಂಕನಿರಿವಲ್ಲಿ ಘಾಯಖಂಡಿಯ ತೋರಿದಾತನೆ ತೆತ್ತಿಗ,
ಕೈಯ ಕೈದು ಬಿದ್ದಲ್ಲಿ ಎತ್ತಿ ಕೊಟ್ಟಾತನೆ ಹಿತವ,
ಲಿಂಗದೇವನ ಶರಣ ಸೊಡ್ಡಳ ಬಾಚರಸರ ಕರುಣವುಳ್ಳನ್ನಕ್ಕರ
ಇನ್ನು ನಾನು ಅಂಜುವವನಲ್ಲ ಕಾಣಾ, ಚನ್ನಬಸವಣ್ಣ.

ಯುದ್ಧ ಮಾಡುವಾಗ ಎದುರಾಳಿ ಇರಿಯುವಾಗ ಘಾಯ ಖಂಡಿಯಾಗಿರುವ ಭಾಗವನ್ನು ಏಟನಿಂದ ಹೇಗೆ ತಪ್ಪಿಸಿಕೊಳ್ಳಬೇಕು ಎಂಬ ಸೂಚನೆ ಕೊಡುವವನೆ ಹಿತೈಷಿ. ಕೈಯೊಳಗಣ ಆಯುಧ ಜಾರಿ ಬಿದ್ದಾಗ ಅದನ್ನು ಎತ್ತಿಕೊಡುವವನೆ ಹಿತೈಷಿ. ಹಾಗೆ ಜೀವನ ಎಂಬ ರಣರಂಗದಲ್ಲಿ ಸಮಾಜ ಪರಿವರ್ತನೆಗಾಗಿ ಹೋರಾಡುವಾಗ ಉತ್ತಮ ಸಲಹೆ ಕೊಡುವವನೇ ಹಿತೈಷಿ. ಸೊಡ್ಡಳ ಬಾಚರಸರು ಅಂಥ ಕಳಕಳಿಯ ವ್ಯಕ್ತಿ. ಅವರು ಕರುಣೆ ಇಟ್ಟು ಸಲಹೆ ನೀಡಿ, ಸಹಕಾರ ಕೊಡುವವರೆಗೆ ನನಗೆ ಯಾವ ಅಂಜಿಕೆಯೂ ಇಲ್ಲ.

1259. ಶರಣರಿಗೆ ಸಾವಿಲ್ಲ

ಎಮ್ಮವರಿಗೆ ಸಾವಿಲ್ಲ. ಎಮ್ಮವರು ಸಾವನರಿಯರು.
ಸಾವೆಂಬುದು ಸಯವಲ್ಲ.
ಲಿಂಗದಲ್ಲಿ ಉದಯವಾದ ನಿಜೈಕ್ಯರಿಗೆ
ಆ ಲಿಂಗದಲ್ಲಿಯಲ್ಲದೆ ಬೇರೆ ಮತ್ತೊಂದೆಡೆಯಿಲ್ಲ
ಲಿಂಗದೇವರ ಶರಣ ಸೊಡ್ಡಳ ಬಾಚರಸರು
ನಿಜಲಿಂಗದ ಒಡಲೊಳಗೆ ಬಗಿದು ಹೊಕ್ಕಡೆ
ಉಪಮಿಸಬಲ್ಲವರ ಕಾಣೆನು.

ನಿಜ ಜ್ಞಾನಿಯಾದ ಶರಣರಿಗೆ ಸಾವಿಲ್ಲ ; ಶರಣರು ಸಾವೆಂಬುದನರಿಯರು, ಸಾವೆಂಬುದು ಶಾಶ್ವತವಲ್ಲ. ಜೀವಾತ್ಮವು ಉದಿಸಿ ಬರುವುದು ಲಿಂಗದೇವನಿಂದಲೇ, ಪುನಃ ಹೋಗಿ ಅಡಗುವುದು ಲಿಂಗದೇವನಲ್ಲಿಯೆ ! ಶರಣ ಸೊಡ್ಡಳ ಬಾಚರಸರು ಲಿಂಗೈಕ್ಯರಾಗಿ ನಿಜಲಿಂಗದ ಒಡಲೊಳಗೆ ಬಗಿದು ಹೊಕ್ಕಡೆ ಇದನ್ನು ವರ್ಣಿಸಲು ಸಾಧ್ಯವಿಲ್ಲ.

1260. ನಿಂದ ಸ್ಥಲದಲ್ಲೇ ಷಡುಸ್ಥಲ

ಮೆಲ್ಲ ಮೆಲ್ಲನೆ ಭಕ್ತಾದ್ಯೈಕ್ಯಾಂತವಾದೆಹೆನೆಂದು

ತಾಮಸ ಜ್ಞಾನದಲ್ಲಿರಲು
ಅದಕ್ಕೆ ನೀನು ನಿತ್ಯವ ಪಡೆದು ಬಂದೆಯಾ ಎಂದು
ನಿಂದ ಸ್ಥಲದಲ್ಲಿಯೆ ನಿಜ ಷಡುಸ್ಥಲವಡಗದಿರ್ದಡೆ
ಜಂಗಮದಾಸೋಹವೇಕೆಂದು ಹೇಳಿ ನಿಜವ ಕರುಣಿಸಿದನಾಗಿ
ಲಿಂಗಜಂಗಮದ ಭೇದವ ಚನ್ನಬಸವಣ್ಣ ಬಲ್ಲ.
ನಾನು ಆತನಿರಿಸಿದಂತಿಪ್ಪೆನಯ್ಯಾ
ಇದು ಕಾರಣ, ಲಿಂಗದೇವರಲ್ಲಿ
ಚಂದಯ್ಯನಿಗೆ ಶರಣೆಂದು ಶುದ್ಧನಾದೆ ಪ್ರಭುವೆ.

ನಿಧಾನವಾಗಿ ಭಕ್ತ, ಮಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂಬ ಷಡುಸ್ಥಲವನ್ನು ಕ್ರಮವಾಗಿ ಹತ್ತಬೇಕು ಎಂಬ ಅಜ್ಞಾನದಲ್ಲಿರಲು, 'ಹೀಗೆ ಮಾಡಲು ನೀನು ನಿತ್ಯತ್ವವನ್ನು ಪಡೆದಿದ್ದಿಯಾ?' ಎಂದು ಟೀಕಿಸಿ, ಪ್ರತಿಯೊಂದು ಸ್ಥಲದಲ್ಲೂ ಷಡುಸ್ಥಲ ನೆಲೆಗೊಳ್ಳಬೇಕು ; ಸಾಧನೆಯ ಜೊತೆಗೇ ಜಂಗಮ ದಾಸೋಹ (ಸಮಾಜ ಸೇವೆ) ಅಳವಡಬೇಕು ಎಂದು ಹೇಳಿದಾತ ಚನ್ನಬಸವಣ್ಣ. ಲಿಂಗಜಂಗಮದ ಭೇದವ ಚನ್ನಬಸವಣ್ಣ ಬಲ್ಲ. ನಾನು ಆತನು ಇರಿಸಿದಂತೆ ಇರುವೆ. ಲಿಂಗದೇವನಲ್ಲಿ ಚಂದಯ್ಯನಿಗೆ ಶರಣೆಂದು ಶುದ್ಧನಾದೆ.

1261. ಜಂಗಮಸೇವೆಯೇ ಸರ್ವಸ್ವ

ಜಂಗಮ ಪೂಜೆಯೇ ಗುರುಪೂಜೆಯೆಂದರಿದ
ಜಂಗಮಸೇವೆಯೆ ಲಿಂಗಪೂಜೆಯೆಂದರಿದ;
ಜಂಗಮಸೇವೆಯೆ ತನ್ನಿರವೆಂದರಿದ;
ಜಂಗಮಸೇವೆಯೇ ತನ್ನ ನಿಜವೆಂದರಿದ;
ಜಂಗಮಸೇವೆಯೆ ತನ್ನ ಸ್ವಯವೆಂದರಿದ;
ಜಂಗಮಸೇವೆಯೆ ನಿತ್ಯಪದವೆಂದರಿದ;
ಇದು ಕಾರಣ, ನಮ್ಮ ಲಿಂಗದೇವನಲ್ಲಿ
ಜಂಗಮಪ್ರಾಣಿಯಾದ ಚಂದಯ್ಯನ ಹಳೆಮಗನಾಗಿ
ಆತನ ಶ್ರೀ ಚರಣಕ್ಕೆ ಶರಣೆಂದು ಶುದ್ಧನು,
ಆ ಮಹಾಮಹಿಮನ ಘನವ ನಾನೆತ್ತ ಬಲ್ಲೆನಯ್ಯಾ ಪ್ರಭುವೆ?

ನುಲಿಯ ಚಂದಯ್ಯನವರು ಜಂಗಮ (ಸಮಾಜ) ಸೇವೆಯಲ್ಲೇ ಆಸಕ್ತರು. ಅದರ ಮುಂದೆ ಲಿಂಗಪೂಜೆಯೂ ಬೇಡ ಎನ್ನುವ ವಾದದವರು. ಜಂಗಮಸೇವೆ ಮಾಡಿದರೆ ಗುರುಪೂಜೆ, ಲಿಂಗಪೂಜೆ ಎರಡೂ ಆಗುತ್ತದೆ. ಅದೇ ತನ್ನಿರವು, ನಿಜವು, ಸ್ವಯವು, ನಿತ್ಯ ಪದವು ಎಂದು ಅರಿದವರು. ಜಂಗಮ ಪ್ರಾಣಿಯಾದ ಚಂದಯ್ಯನ ಮಗ ನಾನು. ಅವರೊಡನೆ ವಾದವನ್ನು ನಾನೊಲ್ಲೆ ಪ್ರಭುವೆ !

ಇಷ್ಟಲಿಂಗದ ಆವಶ್ಯಕತೆಯಿಲ್ಲ. ಮೋಕ್ಷಕ್ಕೆ ಜಂಗಮಸೇವೆ ಸಾಕು ಎಂದು ವಾದವನ್ನು ಮಂಡಿಸಿದ ಚಂದಯ್ಯನವರಿಗೆ ಚನ್ನಬಸವಣ್ಣ, ಮಡಿವಾಳ ಮಾಚಿದೇವರು, ಪ್ರಭುದೇವರು ಸೇರಿ ಇಷ್ಟಲಿಂಗದ ಆವಶ್ಯಕತೆ ಕುರಿತು ಮನವರಿಕೆ ಮಾಡಿಕೊಡುವರು.

1262. ಏನೆಂದು ಅರಿಯೆ

ಆದುದನರಿಯೆ, ಹೋದುದನರಿಯೆ;
ಬಂದುದನರಿಯೆ, ನಿಂದುದನರಿಯೆ,
ಒಳಗನರಿಯೆ, ಹೊರಗನರಿಯೆ,
ಇಹವನರಿಯೆ, ಪರವನರಿಯೆ;
ಭಾವವನರಿಯೆ, ನಿರ್ಭಾವವನರಿಯೆ,

ಶೂನ್ಯವನರಿಯೆ, ನಿಶ್ಶೂನ್ಯವನರಿಯೆ, ಲಿಂಗದೇವಯ್ಯಾ
ನೀ ಇವೆಲ್ಲವ ಮಾಡಿ ಕೂಡಿದಾತ, ಮಡಿವಾಳ ಬಲ್ಲನಾಗಿ
ನಾನೇನೆಂದೂ ಅರಿಯೆನಯ್ಯಾ !

ಗುರು ಬಸವಣ್ಣನವರು ತಮ್ಮನ್ನು ತಾವು ತಗ್ಗಿಸಿಕೊಂಡು ಇತರ ಶರಣರನ್ನು ಉನ್ನತೀಕರಿಸಿ ಮಾತನಾಡುವರು. ತೂರ್ಯಾವಸ್ಥೆಯಲ್ಲಿ ಅವರ ಮನಸ್ಸು ನಿಂತಿದೆ ಆಗ, "ಏನು ಆಯಿತೆಂದು ಅರಿಯೆ, ಏನು ಹೊಯಿತು ಎಂದರಿಯೆ, ಏನು ಬಂದಿತು. ನಿಂದಿತು ಎಂದರಿಯೆ, ಒಳ-ಹೊರಗನ್ನು ಅರಿಯೆ, ಇಹಲೋಕದ ಪ್ರಜ್ಞೆಯಿಲ್ಲ, ದೇವನನ್ನು ಅನುಭವಿಸುತ್ತಿರುವೆ ಎಂಬ ಅರಿವಿಲ್ಲ. ಭಾವವು ದೇವನಲ್ಲಿ ಕರಗಿ ನಿರ್ಭಾವವಾಗಿದೆ. ಶೂನ್ಯ ಸ್ವರೂಪಿ ದೇವನನ್ನು ಅರಿಯೆ; ಮನಸ್ಸು ನಿಶ್ಶೂನ್ಯದಲ್ಲಿ ಕರಿಗಿ ಹೋಗಿದೆ. ಲಿಂಗದೇವಾ, ನೀನೇ ಇವೆಲ್ಲ ಭೇದಗಳನ್ನು ಮಾಡಿದವನು ಮತ್ತು ನನ್ನೊಡನೆ ಕೂಡಿದವನು, ಮಡಿವಾಳ ಮಾಚಿದೇವರು ಇದೆಲ್ಲವನ್ನೂ ಬಲ್ಲವರು. ನಾನು ಏನೆಂದೂ ಅರಿಯೆನಯ್ಯಾ!

1263. ಮಾಚಿದೇವ ಘನಮಹಿಮ

ಎನ್ನ ಕಾಯದ ಕತ್ತಲೆಯ ಕಳೆಯಲರಿಯೆನು
ಎನ್ನ ಜೀವದ ನಿಲವ ಗೆಲಲರಿಯೆನು
ಎನ್ನ ಭಾವದ ಸೂತಕವ ಕಳೆಯಲರಿಯೆನು
ನಾನೆಂತು ಬಲ್ಲೆನಯ್ಯಾ ನಿಮ್ಮ ಘನಮಹಿಮರ ನಿಲವನು?
ಲಿಂಗದೇವಾ,
ನಿಮ್ಮ ಶರಣ ಮಡಿವಾಳ ಮಾಚಿತಂದೆಯ ಘನವ ನೀವೇ ಬಲ್ಲಿರಿ.

ಆತ್ಮನನ್ನು ಆವರಿಸಿರುವದು 3 ಮಲಗಳ ಆವರಣ, ಅವು ಯಾವುವೆಂದರೆ ಕಾಯದ ಕತ್ತಲೆಯಾದ ಕಾರ್ಮಿಕ ಮಲ. ಜೀವದ ಜಂಜಡವಾದ ಮಾಯಾ ಮಲ, ಭಾವದ ಸೂತಕವಾದ ಆಣವ ಮಲ, ಕಾರ್ಮಿಕ ಮಲದಿಂದ ಅಲ್ಪ ಶಕ್ತತ್ವ, ಮಾಯಾಮಲದಿಂದ ಅಲ್ಪಜ್ಞತ್ವ. ಆಣವ ಮಲದಿಂದ ಅಲ್ಪ ವ್ಯಾಪಕತ್ವ ಆತ್ಮನಿಗೆ ಪ್ರಾಪ್ತಿಯಾಗುವುದು. ಇವೆಲ್ಲವನ್ನೂ ಕಳೆಯಲು ನನಗೆ ಸಾಧ್ಯವಾಗಿಲ್ಲ. ಹೀಗಿರುವಾಗ ಇವನ್ನೆಲ್ಲ ಕಳೆದುಕೊಂಡ ನಿಮ್ಮ ಘನಮಹಿಮರ ನಿಲುವ ನಾನು ಹೇಗೆ ತಿಳಿದುಕೊಳ್ಳಬಲ್ಲೆ? ಲಿಂಗದೇವಾ, ನಿಮ್ಮ ಶರಣ ಮಡಿವಾಳ ಮಾಚಿತಂದೆಯ ಘನ ವ್ಯಕ್ತಿತ್ವವನ್ನು ನೀವೇ ಬಲ್ಲಿರಿ !

1264. ಶರಣರಿಂದ ಶುದ್ಧನಾದೆ.

ಅಯ್ಯಾ, ನಾನು 'ದಾಸೋಹವ ಮಾಡುವೆನಲ್ಲದೆ, ಸಮಯವನರಿಯೆ
ಅಯ್ಯಾ, ನಾನು ಭಕ್ತಿಯ ಮಾಡುವೆನಲ್ಲದೆ, ಭಾವವನರಿಯೆ
ಸ್ಥಳಕುಳವ ವಿಚಾರಿಸಿದಡೆ, ಎನ್ನಲ್ಲಿ ಏನೂ ಹುರುಳಿಲ್ಲ
ನಿಮ್ಮ ಶರಣರ ಸೋಂಕಿನಲ್ಲಿ ಶುದ್ಧನಾದೆನು.
ಲಿಂಗದೇವರು ಸಾಕ್ಷಿಯಾಗಿ ಮಡಿವಾಳ ಮಾಚಿತಂದೆಗಳ ಶ್ರೀಪಾದಕ್ಕೆ
ನಮೋ ನಮೋ ಎಂದು ಬದುಕಿದೆನು.

ನಾನು ಯಾಂತ್ರಿಕವಾಗಿ ದಾಸೋಹ ಮಾಡುತ್ತೇನಲ್ಲದೆ ಸಮಯೋಚಿತನಾಗಿ ಹೇಗೆ ಮಾಡಬೇಕು ಎಂಬ ಸಮಯಾಚಾರವನ್ನರಿಯೆ. ನಾನು ಭಕ್ತಿಯನ್ನು ಯಾಂತ್ರಿಕವಾಗಿ ಮಾಡುವೆನಲ್ಲದೆ ಭಾವತುಂಬಿ ಮಾಡಲು ಅರಿಯೆನು. ಯಾವ ಸ್ಥಲದಲ್ಲಿದ್ದೇನೆ, ಯಾವ ಸ್ಥಿತಿ (ಕುಳವನ್ನು) ಯನ್ನು ಹೊಂದಿದ್ದೇನೆ ಎಂದರೆ ಹೇಳಲು ಬರುವುದಿಲ್ಲ. ನಿಮ್ಮ ಶರಣರ ಒಡನಾಟದಿಂದ ನಾನು ಶುದ್ಧನಾದೆನು. ಅಂಥ ಶರಣರ ಸಂಗವನ್ನು ಒದಗಿಸಿಕೊಟ್ಟ ಮಡಿವಾಳ ಮಾಚಿದೇವರ ಶ್ರೀ ಪಾದಕ್ಕೆ ನಮೋ ನಮೋ ಎಂಬೆನು.

1265. ಹೊಸಬಗೆಯ ಮಡಿ.

ಕೋಟಿ ರುದ್ರರು ಮಡಿದರು
ಅನಂತಕೋಟಿ ಬ್ರಹ್ಮ ವಿಷ್ಣುಗಳು ಮಡಿದರು.
ನರರು, ಸುರರು, ಗರುಡ, ಗಂಧರ್ವರು ಮಡಿದರು.
ಅವರ ಮಡಿಯೊಳಗೆ ತಾನುಗದೆ,
ತಾನೊಂದು ಹೊಸ ಬಿಳಿದ ಮಡಿ ಮಾಡಿ
ಎನಗುಡಕೊಟ್ಟು ಎನ್ನ ಬದುಕಿಸಿದಾತ,
ಮಡಿವಾಳ ಕಾಣಾ, ಲಿಂಗದೇವಾ.

ಕೋಟಿ ರುದ್ರರು ಮಡಿದರು. ಅನಂತ ಕೋಟಿ ಬ್ರಹ್ಮವಿಷ್ಣುಗಳು ಮಡಿದರು. ನರರು, ಸುರರು, ಗರುಡ, ಗಂಧರ್ವರು ಮಡಿದರು. ಅವರೆಲ್ಲರು ಬದುಕಿ ಸತ್ತವರು. ಅವರ ದಾರಿಯಲ್ಲಿ (ಮಡಿಯಲ್ಲಿ) ನಾನು ಹೋಗದೆ ಬೇರೊಂದು ದಾರಿಯಲ್ಲಿ ಸಾಗಿದೆ. ಮಾಚಿದೇವರು ಹೊಸ ಬಗೆಯ ಬಿಳಿಯ ಬಟ್ಟೆಯನ್ನು ಮಡಿ ಮಾಡಿ ನನಗೆ ಉಡಲು ಕೊಟ್ಟರು.

ಶರಣ ಮಾರ್ಗ ಹಿಂದಿನವರ ಪಥಕ್ಕಿಂತಲೂ ಬೇರೆಯೇ ಆದುದು ಎಂಬುದು ಈ ವಚನದಿಂದ ತಿಳಿದುಬರುತ್ತದೆ.

1266. ತ್ರಿವಿಧ ಸ್ಥಲಾನುಭಾವಿ ಮಾಚಯ್ಯ

ಆಚಾರದ ಸುಖವನಂಗದಲ್ಲಿ ನೆಲೆಗೊಳಿಸಿ ತೋರಿದ
ಅನುಭಾವದನುವ ಪ್ರಾಣದಲ್ಲಿ ನೆಲೆಗೊಳಿಸಿ ತೋರಿದ
ಮಹಾಜ್ಞಾನದ ಸುಖವ ಸರ್ವಾಂಗದಲ್ಲಿ ನೆಲೆಗೊಳಿಸಿ ತೋರಿದ
ಇಂತೀ ತ್ರಿವಿಧಸ್ಥಲ ನಿರ್ಣಯವನೆನಗೆ ಅರುಹಿದ ಕಾರಣ
ಲಿಂಗದೇವಯ್ಯಾ
ಮಡಿವಾಳ ಮಾಚಯ್ಯನ ಪಾದಕ್ಕೆ ನಮೋ ನಮೋ ಎನುತಿರ್ದೆನು.

ಧಾರ್ಮಿಕ ಆಚರಣೆ ಮಾಡುವುದರಲ್ಲಿ ಒಂದು ಬಗೆಯ ಸುಖವಿದೆ. ಅದನ್ನು ಅರಿಯದವರು ಧರ್ಮದಿಂದ ದೂರ ಉಳಿಯುತ್ತಾರೆ. ಧರ್ಮದ ಕ್ರಿಯಾಂಗವೇ ಆಚಾರ. ಶೌಚ, ಸ್ನಾನ, ಪೂಜಾದಿ ಕ್ರಿಯೆಗಳು ಆಚಾರದ ಅವಿಭಾಜ್ಯ ಅಂಗ. ಅವನ್ನು ಶರೀರ ಶುದ್ಧಿಗಾಗಿ ಅಳವಡಿಸಿಕೊಳ್ಳಬೇಕು ಬರೀ ಆಚಾರವನ್ನಷ್ಟೆ ಅಳವಡಿಸಿಕೊಂಡರೆ ಅದು ಯಾಂತ್ರಿಕ ಕ್ರಿಯೆಯಾಗುತ್ತದೆ. ಶರೀರ ಶುದ್ಧಿಯ ನಂತರ ಪ್ರಾಣಶುದ್ಧಿಯಾಗಬೇಕು. ಇದು ಅನುಭಾವ ದಿಂದ ಸಾಧ್ಯ. ಪರಮಾತ್ಮನ ಮಹಾಜ್ಞಾನದ ಸುಖವನ್ನು ಸರ್ವಾಂಗದಲ್ಲೂ ಅಳವಡಿಸಬೇಕು. ಈ ಮೂರನ್ನು ಅಳವಡಿಸಿಕೊಂಡ ಮಾಚಿದೇವರು ನನಗೂ ಅರುಹಿಕೊಟ್ಟ ಕಾರಣ ನಾನು ಅವರ ಪಾದಕ್ಕೆ ನಮೋ ನಮೋ ಎನುತಿರ್ದೆನು.

1267. ಮಾಚಿದೇವರ ಘನ ನಿಲುವು

ಮಡಿವಾಳ ಮಡಿವಾಳನೆಂಬರು, ಮಡಿವಾಳನೆಂಬುದನಾರೂ ಅರಿಯರು !
ಎನ್ನ ಮಲತ್ರಯದಲ್ಲಿ ಹೊದಕುಳಿಗೊಂಬ ಮನದ ಮೈಲಿಗೆಯ ತಂದು
ತನ್ನ ಮನೆಗೆ ಕರೆದುಕೊಂಡು ಹೋಗಿ ಹಾಯ್ಕಿದಡೆ,
ಕೈಮುಟ್ಟಿದಡೆ ಆಗದೆಂದು ತನ್ನ ಪಾದದೊಳಗೆ ಮೆಟ್ಟಿ,
ಅಲುಬಿ ಸೆಳೆದನಯ್ಯಾ
ತನ್ನ ನಿರ್ಮಲವ ಕೊಟ್ಟನೆನಗೆ !

ಆ ಕೊಟ್ಟ ಬೀಳುಡಿಗೆ ಹೊದೆದು ಕೊಂಡೆನಾಗಿ,
ಮಡಿವಾಳ ಮಾಚಿತಂದೆಯ ಕೃಪೆಯಿಂದಲಾನು ಬದುಕಿದೆನಯ್ಯಾ
ಲಿಂಗದೇವಾ.

"ಆತ ಅಗಸ ತಾನೇ ? ಮಂದಿಯ ಬಟ್ಟೆಯನ್ನು ತೊಳೆಯುವವನು" ಎಂದು ಕೆಲವರು ಅಜ್ಞರು ಮೂದಲಿಸಿ ಮಾತನಾಡುವುದುಂಟು. ಆದರೆ ಮಾಚಯ್ಯ ಕೇವಲ ಭೌತಿಕವಾದ ಬಟ್ಟೆಗಳನ್ನು ತೊಳೆಯುವವನಲ್ಲ, ಆತ ನಿಜ ಗುರುವು ಅಹುದು. ನಮ್ಮ ಶರೀರದಲ್ಲಿ ಇರುವ ಕಾರ್ಮಿಕ, ಮಾಯಾ, ಆಣವ ಎಂಬ 3 ಮಲಗಳನ್ನು ಕೇವಲ ಕೈಯಿಂದ ತೊಳೆದರೆ ಸಾಲದೆಂದು ಕಾಲಿನಲ್ಲಿ ಚೆನ್ನಾಗಿ ತುಳಿದು ನಂತರ ಎತ್ತಿ ಒಗೆಯುತ್ತಾನೆ. ನಿರ್ಮಲವಾದ ವ್ಯಕ್ತಿತ್ವ ನೀಡುತ್ತಾನೆ. ಆತನು ಕೊಡುವ ಕಾರುಣ್ಯದಿಂದ ಬೀಳುಡಿಗೆಯ ಹೊದೆದುಕೊಂಡು ನಾನು ಬದುಕಿದೆನು.

1268. ಸೂತ್ರಧಾರಿ ಮಾಚಯ್ಯ

ಸೂತ್ರಧಾರಿ ಮನದ ಮೈಲಿಗೆಯ ಕಳೆಯಬಂದನಯ್ಯಾ ಮಡಿವಾಳನು,
ಎನ್ನ ಕಾಯದ ಮೈಲಿಗೆಯ ತಂದು ತನ್ನ ಮುಂದೆ ಇರಿಸಿದಡೆ
ಸಮತೆಯೆಂಬ ಕೋಪತೋಹಿನಲ್ಲಿ ಅದ್ದಿ, ಕಟ್ಟಿ ಹಿಳಿದನಯ್ಯಾ
ಪಂಚೇಂದ್ರಿಯವರ್ಗಂಗಳ ಜ್ಞಾನವೆಂಬ
ನಿರ್ಮಲ ಜಲದಲ್ಲಿ ಅಲುಬಿ ಸೆಳೆದನಯ್ಯಾ
ರವಿ ಶಶಿ ಶಿಖಿಯ ತೇಜದಲ್ಲಿ ಆರಿಸಿದನು.
ಚತುರ್ದಶ ಷೋಡಶವೆಂಬ ಘಳಿಗೆಯ ಮಾಡಿದನು
ಸಮಾಧಾನವೆಂಬ ಅಡ್ಡೆಯ ಮೇಲಿರಿಸಿ ಸಮಗುಣವೆಂಬ
ಕೊಡತಿಯಲ್ಲಿ ಘಟ್ಟಿಸಿದನು.
ಹರಿಯಿತ್ತಯ್ಯಾ ಸೆರಗು ಮೂರಾಗಿ,
ಆ ಮೂರರುವೆಯ ಕೊಟ್ಟನಯ್ಯಾ, ಎನ್ನ ಕೈಯಲ್ಲಿ
ಆ ಅರುವೆಯ ಗುರುವಿಂಗೊಂದ ಕೊಟ್ಟೆನು.
ಲಿಂಗಕ್ಕೊಂದ ಕೊಟ್ಟೆನು; ಜಂಗಮಕ್ಕೊಂದ ಕೊಟ್ಟೆನು
ಎನಗೆ ಕೊಟ್ಟ ಮೂರರುವೆಯನೂ
ಒಂದು ಮಾಡಿ ಹೊದೆದುಕೊಂಡು ನಿಶ್ಚಿಂತವಾಗಿ
ಮಡಿವಾಳನ ಕೃಪೆಯಿಂದಲಾನು ಬದುಕಿದೆನು ಕಾಣಾ ಲಿಂಗದೇವಾ.

ನನ್ನ ಜೀವನದ ಸೂತ್ರಧಾರಿ ಮಾಚಯ್ಯ ಮನಸ್ಸಿನ ಮೈಲಿಗೆಯನ್ನು ಕಳೆಯಲೆಂದೇ ಹುಟ್ಟಿ ಬಂದಿದ್ದಾನೆ. ಮೈಲಿಗೆಯಾದ ಮನವ ಆತನ ಕೈಯಲ್ಲಿ ಕೊಟ್ಟರೆ ಚಿತ್ತಸಮತೆ ಎಂಬ ಬಾವಿಯ ನೀರಿನಲ್ಲಿ (ಕೂಪತೋಹು)ಅದ್ದಿ, ನೆನೆ ಹಾಕಿದನು. ಪಂಚೇಂದ್ರಿಯಗಳನ್ನು ಜ್ಞಾನವೆಂಬ ಶುದ್ಧವಾದ ನೀರಿನಲ್ಲಿ ಎದ್ದಿ ಒಗೆದನು. ಸೂರ್ಯ ಚಂದ್ರರ ಶಾಖದಲ್ಲಿ ಆರಿಸಿದನು. 14,16 ಮಡಿಕೆಗಳನ್ನು ಮಾಡಿದನು. ಸಮಾಧಾನ ಎಂಬ ಅಡ್ಡೆಯ ಮೇಲೆ ಇರಿಸಿ, ಸಮಗುಣವೆಂಬ ಕೊಡತಿಯಲ್ಲಿ ಘಟ್ಟಿಸಿದನು. ಆಗ ಆ ವಸ್ತ್ರವು ಮೂರಾಗಿ ಹರಿಯಿತು. ತ್ಯಾಗಾಂಗ, ಭೋಗಾಂಗ ಮತ್ತು ಯೋಗಾಂಗ ಎಂಬ ಆ ಮೂರು ತುಂಡುಗಳನ್ನು ನಾನು ಗುರು, ಲಿಂಗ ಮತ್ತು ಜಂಗಮಕ್ಕೆ ಸಲ್ಲಿಸಿದೆ. ಆ ಮೂರು ಅರಿವೆಯನ್ನೂ ಒಂದು ಮಾಡಿ, ದಿವ್ಯಾನುಭವದ ಆ ಅರಿವೆಯನ್ನು ಹೊದೆದುಕೊಂಡು ನಿಶ್ಚಿಂತನಾಗಿ ಆನಂದದಿಂದ ಬದುಕುತ್ತಿದ್ದೇನೆ. ಇದು ಮಡಿವಾಳನ ಕೃಪೆಯಿಂದ ಸಾಧ್ಯವಾಯಿತು.

1269. ಶರಣ ಸಖ್ಯ

ಕಲ್ಪಿತವ ಕಳೆದ ಅಕಲ್ಪಿತವ ತಿಳುಹಿದ;
ಮನವ ಮಾಣಿಸಿ ಘನವ ನೆಲೆಗೊಳಿಸಿದ.
ತನುವ ಕೆಡಿಸಿ, ಅನುವ ಸ್ಥಾಪ್ಯವ ಮಾಡಿ,
ಅಂತರಂಗದಲ್ಲಿ ಮಹಾಜ್ಞಾನವ ತುಂಬಿದ;
ಬಹಿರಂಗದಲ್ಲಿ ಸದಾಚಾರವ ನೆಲೆಗೊಳಿಸಿದ;
ನಿಮ್ಮ ನಿಲವನೆನಗೆ ಒರೆದೊರೆದು ಹೇಳಿ ತೋರಿಸಿ,
ಎನ್ನ ನಿಮ್ಮ ಶ್ರೀಪಾದಕ್ಕೆ ಯೋಗ್ಯನ ಮಾಡಿದ
ಲಿಂಗದೇವಯ್ಯಾ, ನಿಮ್ಮ ಮಹಾಮನೆಯಲ್ಲಿ
ಮಡಿವಾಳನೂ ನಾನು ಕೂಡಿ ಸುಖದಲ್ಲಿ ಇದ್ದೇವಯ್ಯಾ.

ಮನುಷ್ಯನ ಸ್ವಭಾವವೆಂದರೆ ಮುಂದೆ ಆಗಬಹುದಾದುದನ್ನು ಕಲ್ಪಿಸಿಕೊಂಡು ಬಹುಬಗೆಯ ವಿಹ್ವಲತೆಗೆ ಒಳಗಾಗುವುದು. ಇಂಥ ಕಲ್ಪಿತದ ಅವಗುಣವನ್ನು ಬಿಡಿಸಿದ. ವಾಸ್ತವವಾಗಿ ಏನು ಬರುವುದೋ ಅದನ್ನು ಎದುರಿಸಬೇಕೆಂದು (ಅಕಲ್ಪಿತವ) ತಿಳಿಸಿದ. ಚಂಚಲತೆಯಿಂದ ಹರಿಯುವ ಮನಸ್ಸನ್ನು ಮಣಿಸಿ ಅದರಲ್ಲಿ ಪರಮಾತ್ಮನ ನೆನಹನ್ನು ಸ್ಥಾಪನೆ ಮಾಡಿದ. ಶರೀರದ ಗುಣಗಳನ್ನು ಅಳಿಸಿ ಅಲ್ಲಿ ಲಿಂಗತತ್ತ್ವವನ್ನು ಸ್ಥಾಪನೆ ಮಾಡಿದ. ಅಂತರಂಗದಲ್ಲಿ ದಿವ್ಯಜ್ಞಾನವನ್ನು ತುಂಬಿ ಬಹಿರಂಗದಲ್ಲಿ ಸದಾಚಾರವನ್ನು ನೆಲೆಗೊಳಿಸಿದ. ದೇವರ ಸ್ವರೂಪವನ್ನು ಬಿಡಿಬಿಡಿಸಿ ಹೇಳಿ ತೋರಿಸಿ ಎನ್ನ ನಿಮ್ಮ ಪಾದಕ್ಕೆ ಯೋಗ್ಯನನ್ನಾಗಿ ಮಾಡಿದ. ಹೀಗಾಗಿ "ಲಿಂಗದೇವಯ್ಯ, ನಿಮ್ಮ ಮಹಾಮನೆಯಲ್ಲಿ ಮಡಿವಾಳನೂ ನಾನೂ ಕೂಡಿ ಸುಖದಲ್ಲಿ ಇದ್ದೇವೆ." ಎನ್ನುವ ವಾಕ್ಯ ಬಹಳ ಮಹತ್ವಪೂರ್ಣ. ಗುರು ಬಸವಣ್ಣನವರೂ ಮಡಿವಾಳ ಮಾಚಿದೇವರ ನಡುವೆ ಕೇವಲ ಗುರುಶಿಷ್ಯ ಬಾಂಧವ್ಯವಷ್ಟೇ ಅಲ್ಲ ಒಂದು ಬಗೆಯ ವಿಶ್ವಾಸಪೂರ್ವಕ ಮಿತ್ರತ್ವವಿತ್ತು ಎಂದು ಊಹಿಸಬಹುದು. ಮಾಚಿದೇವರಂತೂ ಗುರು ಬಸವಣ್ಣನವರನ್ನು ಪ್ರಾಣಕ್ಕಿಂತಲೂ ಮಿಗಿಲಾಗಿ ಪ್ರೀತಿಸುತ್ತಿದ್ದರು, ಆರಾಧಿಸುತ್ತಿದ್ದರು.

1270. ಕಾಮನ ಗೆದ್ದವರು ಮೂವರು ಮಾತ್ರ

ದೇವರು ಕಾಮನ ಕೊಂದರೆಂಬರು; ದೇವರಿಗಿಬ್ಬರು ಹೆಂಡಿರುಂಟು
ದೇವರು ಕಾಮನ ಕೊಂದುದಿಲ್ಲ ಕಾಣ ಭೋ !
ಕಾಮವೈರಿಗಳು, ಕಾಮನ ಕೊಂದ ಮೂವರಿತ್ತಲೈದಾರೆ
ಲಿಂಗದೇವನಲ್ಲಿ ಶುಕನು, ಸೊನ್ನಲಿಗೆ ಸಿದ್ಧರಾಮಯ್ಯನು,
ಹನುಮಂತನು.

ಶಿವನು ಕಾಮದಹನವ ಮಾಡಿದನೆಂದು ಹೇಳಲಾಗುವುದು. ಆದರೆ ಶಿವನಿಗೆ ಗಂಗೆ-ಗೌರಿ ಎಂಬ ಇಬ್ಬರು ಹೆಂಡತಿಯರು. ಕಾಮನ ಕೊಂದರೆ ಸಂಸಾರಿ ಏಕಾಗುತ್ತಿದ್ದ? ಕಾಮನ ವೈರಿಗಳು, ಕಾಮನ ಕೊಂದ ಮೂವರು ಬೇರೆ ಇದ್ದಾರೆ. ಅವರೆಂದರೆ ಶುಕ ಮಹರ್ಷಿ, ಸೊನ್ನಲಿಗೆಯ ಸಿದ್ಧರಾಮ ಮತ್ತು ಹನುಮಂತ.

1271. ಮಹಾದೇವಿಯಕ್ಕನ ನಿಲುವು

ಹೆಂಗೂಸಿನಂಗವ ನೋಡಿರೆ ಪುರಾತರು
ಬಾಲತನದಂಗವ ನೋಡಿರೆ ಪುರಾತರು
ಬ್ರಹ್ಮವನಾಚರಿಸಿ ತನ್ನ ಮರೆದಿಪ್ಪುದ ನೋಡಿರೆ ಲಿಂಗವಂತರು

ತನ್ನಲ್ಲಿ ತಾನು ನಿಶ್ಚಯವಾಗಿ, ಭಾಷೆ ಬೀಸರವೋಗದೆಯಿದ್ದ ಇರವು
ಲಿಂಗದೇವರಲ್ಲಿ ನಮ್ಮ ಮಹಾದೇವಿಯಕ್ಕಂಗಾಯಿತ್ತು.

ಶರಣರೆ, ಹೆಣ್ಣುಮಗುವಿನ ನಿಲುವನ್ನು ನೋಡಿರಿ. ಸಣ್ಣ ಮಗುವಿನಂತೆ ಕಾಣುವ ನಿಲುವನ್ನು ನೋಡಿರಿ ಪುರಾತರೆ! ಬ್ರಹ್ಮ ತತ್ತ್ವವ ಅಳವಡಿಸಿಕೊಂಡು ತನ್ನತನವ ಅಳಿದುಕೊಂಡ ಮಹಿಮಳನ್ನು ನೋಡಿರಿ ಲಿಂಗವಂತರೆ! ತನ್ನಲ್ಲಿ ತಾನು ದೃಢ ನಿರ್ಧಾರವನ್ನು ತೆಗೆದುಕೊಂಡು, ವ್ಯರ್ಥ(ಬೀಸರ)ವಾಗಿ ಮಾತನಾಡದೆ ತೂಕಬದ್ಧವಾಗಿ ಮಾತನಾಡುವ ವ್ಯಕ್ತಿತ್ವ ಲಿಂಗದೇವನಲ್ಲಿ ನಮ್ಮ ಮಹಾದೇವಿಯಕ್ಕನಿಗೆ ಆಯಿತು.

1272. ಅಪ್ರತಿಮ ವೈರಾಗ್ಯನಿಧಿ

ಕಾಯದ ಲಜ್ಜೆಯ ಕಲ್ಪಿತವ ಕಳೆದು,
ಜೀವದ ಲಜ್ಜೆಯ ಮೋಹವನಳಿದು.
ಮನದ ಲಜ್ಜೆಯ ನೆನಹ ಸುಟ್ಟು
ಭಾವದ ಕೂಟ ಬತ್ತಲೆಯೆಂದರಿದು,
ತವಕದ ಸ್ನೇಹ ವ್ಯವಹಾರಕ್ಕೆ ಹುಗದು, ಲಿಂಗದೇವಯ್ಯಾ
ಎನ್ನ ಹೆತ್ತ ತಾಯಿ ಮಹಾದೇವಿಯಕ್ಕನ
ನಿಲವ ನೋಡಯ್ಯಾ ಪ್ರಭುವೆ !

ಸಾಮಾನ್ಯವಾಗಿ ಮನುಷ್ಯನಿಗೆ ನಾಚಿಕೆ ಎಂಬುದು ಇರುತ್ತದೆ. ಸಣ್ಣ ಮಕ್ಕಳಿಗೆ ಆ ಭಾವವಿರುವುದಿಲ್ಲ. ಪ್ರೌಢಾವಸ್ಥೆಗೆ ಬರುತ್ತಲೇ ತಾನು ಪುರುಷ, ಸ್ತ್ರೀ ಎಂಬ ಭಾವ ತಲೆದೋರುತ್ತದೆ. ಗೌಣೇಂದ್ರಿಯಗಳನ್ನು ಬಟ್ಟೆಯಿಂದ ಮರೆಮಾಡಿಕೊಳ್ಳುವರು. ಆದರೆ ತುಂಬು ಪ್ರಾಯದಲ್ಲಿದ್ದ ಅಕ್ಕಮಹಾದೇವಿಯಲ್ಲಿ ದೇಹಪ್ರಜ್ಞೆ, ಕಾಯದ ಲಜ್ಜೆಯ ಭಾವ ಕಳೆದುಹೋಗಿತ್ತು. ಮಾನವರಿಗೆ ಜೀವದ ಮೇಲಿನ ಮೋಹ ಅಸಾಧಾರಣವಾದುದು. ಎಲ್ಲಕ್ಕಿಂತಲೂ ಮಿಗಿಲಾಗಿ ತನ್ನ ಜೀವವನ್ನು ಪ್ರೀತಿಸುವರು. ಅಕ್ಕಮಹಾದೇವಿಗೆ ಅಂಥ ಜೀವದ ಮೋಹ ಅಳಿದುಹೋಗಿತ್ತು. ಮನಸಿನ ದೌರ್ಬಲ್ಯವೆಂದರೆ ನೆನಪು. ಎಂದಿನದನ್ನೋ ಯಾರ ಬಗ್ಗೆಯೋ ನೆನಪು ಮಾಡಿಕೊಂಡು ರಾಗ-ದ್ವೇಷಕ್ಕೆ ಒಳಗಾಗುವುದು ಮನದ ಗುಣ. ಇಂಥ ದೌರ್ಬಲ್ಯವನ್ನು ಅಕ್ಕಮಹಾದೇವಿ ಗೆದ್ದಿದ್ದಾಳೆ. ಭಾವವು ಒಂದಾಗುವುದು ದೇವನಲ್ಲಿ. ಅವನು ಬತ್ತಲೆಯ (ಶೂನ್ಯ) ಸ್ವರೂಪ ಎಂದು ಅಕ್ಕ ಅರಿತಿದ್ದಾಳೆ. ಅಕ್ಕಮಹಾದೇವಿ ಸ್ನೇಹಜೀವಿ; ಆದರೆ ಆಕೆಯನ್ನು ವ್ಯವಹಾರಕ್ಕೆ ಎಳೆಯುವುದು ಸಾಧ್ಯವಿಲ್ಲ. ಅಂಥ ತೀಕ್ಷ್ಣ ವೈರಾಗ್ಯಮೂರ್ತಿ. ಲಿಂಗದೇವಯ್ಯಾ, ಎನ್ನ ಹೆತ್ತ ತಾಯಿ ಮಹಾದೇವಿಯಕ್ಕನ ವ್ಯಕ್ತಿತ್ತ್ವವನ್ನು ನೋಡು ಪ್ರಭುವೆ !

1273. ಮಹಾದೇವಿಯಕ್ಕನಿಗೆ ಯಾವ ಹೊರೆಯೂ ಇಲ್ಲ.

ರೂಹಿಲ್ಲದಂಗೆ ಒಲಿದವರಿಗೆ ತನುವಿನ ಹಂಗುಂಟೆ ?
ಮನವಿಲ್ಲದಂಗೆ ಮಚ್ಚಿದವರಿಗೆ ಅಭಿಮಾನದ ಹಂಗುಂಟೆ?
ದಿಗಂಬರಂಗೆ ಒಲಿದವರಿಗೆ ಕೌಪೀನದ ಹಂಗುಂಟೆ?
ಲಿಂಗದೇವಯ್ಯಾ,
ಮಹಾದೇವಿಯಕ್ಕನೆಂಬ ಭಕ್ತೆಗೆ
ಆವ ಹೊರೆಯೂ ಇಲ್ಲ ನೋಡಾ, ಪ್ರಭುವೆ !

ರೂಪವೇ ಇಲ್ಲದ ದೇವನಿಗೆ ಒಲಿದವರಿಗೆ ಶರೀರದ ಹಂಗು ಇರುವುದೇ ? ಮನವೇ ಇಲ್ಲದ ದೇವಂಗೆ ಶರಣಾದವರಿಗೆ ದೇಹಾಭಿಮಾನದ ಹಂಗು ಇರುವುದೆ ? ದಿಕ್ಕುಗಳನ್ನೇ ಅಂಬರವಾಗಿ ಮಾಡಿಕೊಂಡ ದೇವನಿಗೆ ಒಲಿದವರಿಗೆ ಕೌಪಿನದ ಹಂಗು ಇರುವುದೆ?

ಮಹಾದೇವಿಯಕ್ಕ ಎಂಬ ಭಕ್ತಿಗೆ ಯಾವ ಹೊರೆಯೂ ಇಲ್ಲ. ಎಲ್ಲ ಲೌಕಿಕ ಬಂಧನಗಳಿಂದಲೂ ಮುಕ್ತಳಾಗಿದ್ದಾಳೆ ನೋಡಾ ಪ್ರಭುವೆ !

1274. ಸ್ವಯಂ ಜ್ಞಾನಿ ಮಹಾದೇವಿಯಕ್ಕ

ಎನ್ನ ಭಕ್ತಿಯ ಶಕ್ತಿಯೂ ನೀನೆ;
ಎನ್ನ ಯುಕ್ತಿಯ ಶಕ್ತಿಯೂ ನೀನೆ;
ಎನ್ನ ಮುಕ್ತಿಯ ಶಕ್ತಿಯೂ ನೀನೆ;
ಎನ್ನ ಮಹಾಘನದ ನಿಲುವಿನ ಪ್ರಭೆಯನುಟ್ಟು
ತಳುವೆಳಗಾದ ಸ್ವಯಂಜ್ಞಾನಿ
ಮಹಾದೇವಿಯಕ್ಕಗಳ ನಿಲವ
ಮಡಿವಾಳನಿಂದರಿದು ಬದುಕಿದೆನಯ್ಯಾ, ಲಿಂಗದೇವಯ್ಯ ಪ್ರಭುವೆ.

ನಾನು ಮಾಡುವ ಭಕ್ತಿಯ ಹಿಂದಿನ ಶಕ್ತಿಯೂ ನೀನೆ. ನಾನು ಮಾಡುವ ಆಲೋಚನಾ ಶಕ್ತಿಯ ಹಿಂದಿನ ಶಕ್ತಿಯೂ ನೀನೆ. ಮುಕ್ತಿಯ ಹಿಂದಿನ ಶಕ್ತಿಯೂ ನೀನೆ. ಮಹಾಘನವಾದ ಪರಮಾತ್ಮನ ಪ್ರಭೆಯನ್ನುಟ್ಟು ಬೆಳಗುತ್ತಿರುವ ಸ್ವಯಂಜ್ಞಾನಿ ಮಹಾದೇವಿಯಕ್ಕನ ವ್ಯಕ್ತಿತ್ವವನ್ನು ನಾನು ಮಡಿವಾಳ ಮಾಚಿದೇವರಿಂದ ಅರಿತು ಬದುಕಿದೆ.

1275. ಮಹಾದೇವಿಯಕ್ಕನ ಅಪೂರ್ವ ಸಾಧನೆ.

ಅಜ್ಞಾನ ಹಿಂಗಿತ್ತು. ಅಹಂಕಾರವಡಗಿತ್ತು
ಅರಿಷಡ್ವರ್ಗಂಗಳು ಹರಿಹಂಚಾದವು.
ಅಷ್ಟಮದಂಗಳು ಪಟ್ಟ ಪರಿಯಾದವು
ದಶವಾಯುಗಳು ವಶವರ್ತಿಯಾದವು.
ಇಂದ್ರಿಯಂಗಳು ಬಂಧನವಡೆದವು
ಮನೋವಿಕಾರ ನಿಂದಿತ್ತು, ಲಿಂಗದೇವಾ,
ನಿಮ್ಮಲ್ಲಿ ನಮ್ಮ ಮಹಾದೇವಿಯಕ್ಕಗಳ
ನಿರ್ವಾಣದ ಸಹಜ ನಿಲವ ಕಂಡು
ನಮೋ ನಮೋ ಎನುತಿರ್ದೆನಯ್ಯಾ, ಪ್ರಭುವೆ.

ಪ್ರಭುದೇವರೇ, ಮಹಾದೇವಿಯಕ್ಕನ ವ್ಯಕ್ತಿತ್ವ ಅಪೂರ್ವ. ಅಜ್ಞಾನವನ್ನು ಅಳಿದುಕೊಂಡು ಸುಜ್ಞಾನಿಯಾಗಿದ್ದಾಳೆ. ಅಹಂಕಾರವನ್ನು ಕಳೆದುಕೊಂಡು ವಿನಯಭಾವಿಯಾಗಿದ್ದಾಳೆ. ಆಕೆಯಲ್ಲಿ, ಕಾಮಕ್ರೋಧಲೋಭಮೋಹಮದಮತ್ಸರ ಎಂಬ ಅರಿಷಡ್ವರ್ಗಗಳೆಲ್ಲ ತಮ್ಮ ಸ್ವರೂಪವನ್ನು ಕಳೆದು ಕೊಂಡಿವೆ. ಅಷ್ಟಮದಗಳಾದ ಕುಲ, ಛಲ, ಧನ, ರೂಪ, ಯೌವನ, ವಿದ್ಯೆ, ಅಧಿಕಾರ, ತಪಸ್ಸು ಮುಂತಾದ ಮದಗಳು ನಾಶವಾಗಿವೆ. ದಶವಾಯುಗಳಾದ ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ ಎಂಬ ಮುಖ್ಯ ಪ್ರಾಣಗಳೈದು, ನಾಗ, ಕೂರ್ಮ, ಕೃಕರ, ದೇವದತ್ತ, ಧನಂಜಯ ಎಂಬ ಉಪಪ್ರಾಣಗಳೈದು ಮಹಾದೇವಿಯಕ್ಕನ ವಶವರ್ತಿಯಾಗಿವೆ. ಪಂಚ ಜ್ಞಾನೇಂದ್ರಿಯಗಳಾದ ಕಣ್ಣು, ಕಿವಿ, ಮೂಗು, ನಾಲಿಗೆ, ಚರ್ಮ, ಮತ್ತು ಪಂಚ ಕರ್ಮೇಂದ್ರಿಯ ಗಳಾದ ಗುದ, ಗುಹ್ಯ, ಪಾದ, ಪಾಣಿ, ವಾಕ್‌ಗಳು, ಅಂತಃಕರಣಗಳಾದ ಚಿತ್ತ, ಮನ, ಬುದ್ಧಿ, ಅಹಂ, ಭಾವಗಳು ಬಂಧನಕ್ಕೆ ಸಿಕ್ಕಿ ನಿಯಂತ್ರಣದಲ್ಲಿವೆ. ಮನಸ್ಸಿನ ವಿಕಾರವು ಸಂಪೂರ್ಣವಾಗಿ ಅಳಿದಿದೆ. ನಿರ್ವಾಣ ಸ್ಥಿತಿಯನ್ನು ತಲ್ಪಿರುವ ಮಹಾದೇವಿಯಕ್ಕನ ಸಹಜ ನಿಲುವನ್ನು ಕಂಡು ನಾನು ನಮೋ ನಮೋ ಎನುತಿರ್ದೆನು.

1276. ಚನ್ನಬಸವಣ್ಣ ಜ್ಞಾನದಲ್ಲಿ ಹಿರಿಯ.

ಶಿಶುವೆನ್ನಬಹುದೇ ನಂಬಿಯಣ್ಣನ?

ಸೂಕ್ಷ್ಮನೆನಬಹುದೆ ರವಿಯನು?
ಜಗವ ಬೆಳಗುವ ದೃಷ್ಟಿ ಕಿರಿದೆನ್ನಬಹುದೆ ?
ಸೃಷ್ಟಿಯನು ಕಾಂಬ ಭಾವ ಕಿರಿದೆನ್ನಬಹುದೆ? ಲಿಂಗದೇವಯ್ಯಾ.
ಯುಗಜುಗವೆಲ್ಲವನೂ ಮೀರಿದ ಶರಣನ
ಕಿರಿದೆನಬಹುದೆ, ಚನ್ನಬಸವಣ್ಣನ?

ಸೌಂದರ ನಂಬಿ ಎಂಬ ತಮಿಳುನಾಡಿನ ಶಿವಭಕ್ತನನ್ನು ಶಿಶು ಎನ್ನಬಹುದೆ ? ಸಣ್ಣ ವಯಸ್ಸಿನಲ್ಲಿ ಶಿವನನ್ನು ಒಲಿಸಿಕೊಂಡನು. ಸೂರ್ಯನಿಗೆ ಸ್ಥೂಲದೇಹವಿಲ್ಲ. ಕೇವಲ ಸೂಕ್ಷ್ಮ ಶರೀರಿ ಎನ್ನಬಹುದೇ? ತನ್ನ ಪ್ರಚಂಡ ಪ್ರಭೆಯಿಂದ ಎಲ್ಲವನ್ನೂ ನಿಯಂತ್ರಿಸುತ್ತಿರುವನು. ದೃಷ್ಟಿಶಕ್ತಿ ಇಲ್ಲದವನಿಗೆ ಎಲ್ಲವೂ ಕತ್ತಲೆ. ಆದ್ದರಿಂದ ಕವಳೆ ಹಣ್ಣಿನಷ್ಟು ಇರುವ ಕಣ್ಣುಗುಡ್ಡೆಯ ಕಿರಿದು ಎನ್ನಬಹುದೆ? ಅದೇ ರೀತಿ ಸೃಷ್ಟಿ ಎಲ್ಲವನ್ನೂ ಅಖಂಡವಾಗಿ ನೋಡುವ ಭಾವೇಂದ್ರಿಯವನ್ನು ಕಿರಿದು ಎನ್ನಬಹುದೆ? ಲಿಂಗದೇವಯ್ಯಾ, ಈ ಯುಗದಲ್ಲಿಯೇ ಅಪೂರ್ವವಾದ ಜ್ಞಾನಿಯಾದ ಚನ್ನಬಸವಣ್ಣನನ್ನು ಕಿರಿಯ, ಸಣ್ಣವಯಸ್ಸಿನವ ಎಂದು ಹೇಳಲು ಸಾಧ್ಯವೆ?

1277. ಚನ್ನಬಸವಣ್ಣನ ನಿಲುವು

ಲೋಕದಿಚ್ಛೆಯ ನಡೆವವನಲ್ಲ, ಲೋಕದಿಚ್ಛೆಯ ನುಡಿವವನಲ್ಲ.
ಲೋಕವಿರಹಿತ ಶರಣ, ಶರಣ ವಿರಹಿತ ಲೋಕವೆಂಬುದು
ಕಾಣಬಂದಿತ್ತು ನೋಡಾ.
ಲಿಂಗವೆ ಗೂಡಾಗಿ ಜಂಗಮವೆ ಸ್ವಾಯತವಾಗಿ,
ಪ್ರಸಾದವೆ ಪ್ರಾಣವಾಗಿ ಪರಿಣಾಮದಲ್ಲಿ ಇಪ್ಪ ನೋಡಯ್ಯಾ.
ಲಿಂಗದೇವಾ, ನಿಮ್ಮ ಶರಣ ಚನ್ನಬಸವಣ್ಣಂಗೆ
ನಮೋ ನಮೋ ಎಂಬೆನು.

ಚಿನ್ಮಯಜ್ಞಾನಿ ಚನ್ನಬಸವಣ್ಣನವರ ವ್ಯಕ್ತಿತ್ವ ಕುರಿತು ಹೇಳುತ್ತಲೇ ಗುರು ಬಸವಣ್ಣನವರು ಶರಣನ ಲಕ್ಷಣ ಹೇಗಿರಬೇಕು ಎಂಬುದನ್ನು ವರ್ಣಿಸುತ್ತಾರೆ ಈ ವಚನದಲ್ಲಿ. ಶರಣನು ಲೋಕದಿಚ್ಛೆಯ ನಡೆಯ, ಲೋಕದಿಚ್ಛೆಯ ನುಡಿಯ. ಲೋಕದ ಜನ, ಸಂಪ್ರದಾಯ, ಸಂಪ್ರದಾಯವಾದಿಗಳು ಹೇಳಿದಂತೆ ಶರಣರು ನಡೆಯದೆ, ನುಡಿಯದೆ ತಮ್ಮ ಅಂತಃಸಾಕ್ಷಿ ಏನು ಹೇಳುವುದೋ ಅದರಂತೆ ನಡೆಯುವರು, ನುಡಿಯುವರು. ಲೋಕದಿಂದ ಭಿನ್ನವಾಗಿರುತ್ತಾನೆ ಶರಣ, ಲೋಕದ ಜನ ಶರಣರ ನಡೆ ನುಡಿಗಳನ್ನು ಅರ್ಥ ಮಾಡಿಕೊಳ್ಳುವುದಿಲ್ಲ. ಶರಣನು ಲಿಂಗದೇವನನ್ನು ಸರ್ವಾಂಗದಲ್ಲಿ ತುಂಬಿಕೊಂಡು ಲಿಂಗದ ಗೂಡಾಗಿರುವನು, ಜಂಗಮ ತತ್ತ್ವವನ್ನು ಅಳವಡಿಸಿಕೊಳ್ಳುವನು. ಪ್ರಸಾದ ತತ್ತ್ವವನ್ನು ಅಳವಡಿಸಿ ಕೊಂಡು ಚಿತ್ತ ಸಮತೆ ಹೊಂದಿ, ಸಂತೃಪ್ತನಾಗಿರುತ್ತಾನೆ. ಇಂಥ ಶರಣತ್ವವನ್ನು ವಯಸ್ಸಿನಲ್ಲಿ ಚಿಕ್ಕವನಾದರೂ ಚನ್ನಬಸವಣ್ಣ ಅಳವಡಿಸಿಕೊಂಡಿರುವನು. ಅವನ ಘನ ವ್ಯಕ್ತಿತ್ವಕ್ಕೆ ನಮೋ ನಮೋ ಎಂಬೆನು.

1278. ಹುಟ್ಟುತ್ತಲೇ ಪರಿಮಳ

ಬಿತ್ತದೆ ಬೆಳೆಯದೆ ಬೆಳೆದ ಹೆಬ್ಬೆಳಸಿನ ರಾಶಿಯ ನೋಡಾ !
ಸುಗಂಧ ಬಂಧುರದಂತೆ ಹುಟ್ಟುತ್ತಲೇ ಪರಿಮಳ !
ಆದಿ ಅನಾದಿಯಿಲ್ಲದ ಮುನ್ನ ತನ್ನಿಂದವೆ ತಾನಾಗಿರ್ದ ಕಾರಣ
ಮುಟ್ಟದೆ ತಟ್ಟದೆ ಗುರುಕಾರುಣ್ಯವ ಪಡೆದು, ಲಿಂಗ ಸಯವಾಗಿ
ಎನಗೆ ಗತಿಪಥವ ತೋರಿಸಬೇಕೆಂದು ಆಗಾದನು,
ಲಿಂಗದೇವರಲ್ಲಿ ಚನ್ನಬಸವಣ್ಣನು.

ತಾಯಿಯ ಗರ್ಭದಲ್ಲಿರುವಾಗಲೇ ಲಿಂಗಧಾರಣೆ ಮತ್ತು ಉದಾತ್ತ ಸಂಸ್ಕಾರ, ಸಣ್ಣ

ವಯಸ್ಸಿನಲ್ಲೇ ಶರಣರ ಒಡನಾಟ, ಗುರು ಬಸವಣ್ಣನವರ ಅನುಗ್ರಹ ಹಾಗೂ ಮಾರ್ಗದರ್ಶನ- ಇದೆಲ್ಲದರ ಫಲಶ್ರುತಿ ಚಿನ್ಮಯಜ್ಞಾನಿ ಚನ್ನಬಸವಣ್ಣನವರು. ಅವರ ಪ್ರಗತಿ ನೋಡಿ ಸ್ವತಃ ಬಸವಣ್ಣನವರಿಗೆ ಆಶ್ಚರ್ಯ- ಅವರಿಂದ ಉದ್ಗಾರ, "ಬಿತ್ತದೆ ಬೆಳೆಯದೆ ಬೆಳೆದ ಹೆಬ್ಬೆಳಸಿನ ರಾಶಿಯ ನೋಡಾ !" ಎಂದು ದೀಕ್ಷೆಗೆ ಮೊದಲೇ ಮಹಾಜ್ಞಾನಿ. ಸುಗಂಧ ಬಂಧುರದಂತೆ ಹುಟ್ಟುತ್ತಲೇ ಪರಿಮಳ. ಮರುಗ, ದವನ ಮುಂತಾದವು ಹುಟ್ಟುತ್ತಲೇ ಪರಿಮಳ ಹೊಂದಿರುವಂತೆ ಚನ್ನಬಸವಣ್ಣನ ಜ್ಞಾನ. ಹಿಂದಿನ ಜನ್ಮದಿಂದಲೇ ಬಂದ ಸಂಸ್ಕಾರದಿಂದಾಗಿ ಸ್ವಯಂ ಜ್ಞಾನಿಯಾಗಿಯೇ ಹುಟ್ಟಿದ್ದಾನೆ. ಪಂಚೇಂದ್ರಿಯಗಳ ಉಪಟಳವಾಗಲೀ ಅರಿಷಡ್ವರ್ಗಗಳ ಬಾಧೆಯಾಗಲಿ ಮುಟ್ಟದೆ, ತಟ್ಟದೆ ನಿರ್ವಿಕಾರಿಯಾಗಿ ಗುರುಕಾರುಣ್ಯವನ್ನು ಪಡೆದು, ಲಿಂಗಧಾರಿಯಾಗಿದ್ದಾನೆ. ವಯಸ್ಸಿನಲ್ಲಿ ನನಗಿಂತ ಚಿಕ್ಕವನಾದರೂ ಒಮ್ಮೊಮ್ಮೆ ಈತನ ಮಾತು ಕಣ್ತೆರೆಸುವಂತೆ ಇರುತ್ತದೆ. ನನಗೆ ಸಹಾಯಕನಾಗಲೆಂದೇ (ಬೌದ್ಧಿಕ ಸಂಗಾತಿಯಾಗಲೆಂದು) ಈತ ಹುಟ್ಟಿ ಬಂದಂತೆ ತೋರುತ್ತದೆ.

1279.ಚತುರ್ವಿಧ ಸಾರಾಯನು.

ಗುರು ವಚನವ ತನ್ನೊಳಗಿಂಬಿಟ್ಟುಕೊಂಡ ಪ್ರಸಾದಿಯ ಪ್ರಸಾದಿಯೆಂಬೆ.
ಲಿಂಗ ವಚನವ ತನ್ನೊಳಗಿಂಬಿಟ್ಟುಕೊಂಡ ಪ್ರಸಾದಿಯ ಪ್ರಸಾದಿಯೆಂಬೆ,
ಜಂಗಮ ವಚನವ ತನ್ನೊಳಗಿಂಬಿಟ್ಟುಕೊಂಡ ಪ್ರಸಾದಿಯ ಪ್ರಸಾದಿಯೆಂಬೆ,
ಪ್ರಸಾದ ವಚನವ ತನ್ನೊಳಗಿಂಬಿಟ್ಟುಕೊಂಡ ಪ್ರಸಾದಿಯ ಪ್ರಸಾದಿಯೆಂಬೆ,
ಇಂತೀ ಚತುರ್ವಿಧ ಸಂಪನ್ನ, ಲಿಂಗದೇವಯ್ಯನಲ್ಲಿ ಚನ್ನಬಸವಣ್ಣನು.

ಗುರು, ಲಿಂಗ, ಜಂಗಮ, ಪ್ರಸಾದ ಈ ನಾಲ್ಕು ತತ್ತ್ವಗಳನ್ನು ಅಳವಡಿಸಿಕೊಳ್ಳುವುದು ಲಿಂಗಾಯತ ಧರ್ಮಾನುಯಾಯಿಯ ಗುರಿ. ಆ ಪ್ರಕಾರ ಗುರು ತತ್ತ್ವ ಲಿಂಗತತ್ತ್ವ ಜಂಗಮ ತತ್ತ್ವ, ಪ್ರಸಾದ ತತ್ತ್ವಗಳನ್ನು ಅಳವಡಿಸಿಕೊಂಡ ಮಹಾಪ್ರಸಾದಿ ಚನ್ನಬಸವಣ್ಣ ಚತುರ್ವಿಧ ಸಂಪನ್ನ.

1280.ಸರ್ವಾವಧಾನಿ.

ಸರ್ವಾವಧಾನಿ ಸಮಯ ಪ್ರಸಾದಿ ನೋಡಯ್ಯಾ.
ಲಿಂಗಾರ್ಪಿತದಲ್ಲಿ ಸರ್ವಾವಧಾನಿ ನೋಡಯ್ಯಾ
ಅಯ್ಯಾ, ಅನಾಹತಂಗಳ ಮುನ್ನವೆ ಇರಲೀಯ
ಲಿಂಗದೇವರಲ್ಲಿ ಚನ್ನಬಸವಣ್ಣಂಗೆ ನಮೋ ನಮೋ ಎನುತಿರ್ದೆನು.

ಅವಧಾನಿ ಎಂದರೆ ಎಚ್ಚರವುಳ್ಳವ. ದೇವ ಪ್ರಜ್ಞೆಯನ್ನು ಮೈಗೂಡಿಸಿಕೊಂಡು ಸದಾ ಎಚ್ಚರಿಕೆಯಿಂದ ದೇವನಿಗೆ ತನ್ನನ್ನು ತಾನು ಅರ್ಪಿಸಿಕೊಂಡವನೆ ಸರ್ವಾವಧಾನಿ. ಜಾಗ್ರತ್, ಸ್ವಪ್ನ, ಸುಷುಪ್ತಿಯಲ್ಲಿ ದೇವರ ನೆನಹನ್ನು ಅಳವಡಿಸಿಕೊಂಡವನೇ ಅವಧಾನಿ. ತಾನಿದ್ದೆಡೆಗೆ ಬಂದ ವಸ್ತುವನ್ನು, ಊಟವನ್ನು ಸಮಚಿತ್ತದಿಂದ ಉಪ್ಪು, ಹುಳಿ, ಕಾರ, ಅರುಚಿ ಎನ್ನದೆ ಸ್ವೀಕರಿಸುವವನೇ ಸಮಯ ಪ್ರಸಾದಿ. ಲಿಂಗಾನುಸಂಧಾನದಲ್ಲಿ ಅನಾಹತನಾದವನ್ನು ಕೇಳುವ ದಿವ್ಯಾನುಭಾವಿ. ಇಂಥ ಚನ್ನಬಸವಣ್ಣನಿಗೆ ನಮೋ ನಮೋ ಎಂಬೆ.

1281. ಸರ್ವಾಂಗ ಶುದ್ಧ ಚನ್ನಬಸವಣ್ಣ

ಅರ್ಪಿತವ ಮಾಡುವ ಅವಧಾನವು, ಅನ್ಯವ ಸೋಂಕದ ಅವಧಾನವು!
ಅರಿಷಡ್ವರ್ಗಂಗಳ ಮುಟ್ಟಲೀಯದವಧಾನದ ಪರಿಯ ನೋಡಾ.
ಪಂಚಭೂತವೆಂಬ ಭವಿಯ ಕಳೆದು ಪ್ರಸಾದಿಯಾಗಿಪ್ಪ ಪರಿಯ ನೋಡಾ.
ಪಂಚೇಂದ್ರಿಯಗಳ ಗುಣವಳಿದು ಪಂಚವಿಂಶತಿ ತತ್ತ್ವದಲ್ಲಿ ಪರಿಣಾಮಿ
ಲಿಂಗದೇವರಲ್ಲಿ ಚನ್ನಬಸವಣ್ಣನು.

ಪರಮಾತ್ಮನಿಗೆ ಅರ್ಪಿತವ ಮಾಡುವಲ್ಲಿ ಎಚ್ಚರಿಕೆ ಇರಬೇಕು. ಸ್ವಲ್ಪವೂ ಎಂಜಲಾಗದಂತೆ ನೋಡಿಕೊಳ್ಳಬೇಕು. ಅದು ಹೇಗೆಂದರೆ ಇಂದ್ರಿಯಗಳು ಅನ್ಯವನ್ನು ಸೋಂಕಬಾರದು. ಅರಿಷಡ್ವರ್ಗಗಳು ಮುಟ್ಟಬಾರದು. ಅಷ್ಟು ನಿಷ್ಕಳಂಕ ಮನಸ್ಸಿನಿಂದ ಅರ್ಪಿಸಬೇಕು. ನಿತ್ಯ ಜೀವನದಲ್ಲಿ ಬಳಸುವ ಪೃಥ್ವಿ, ಅಪ್, ತೇಜ, ವಾಯು, ಆಕಾಶ ಎಂಬ ಪಂಚಭೂತಗಳನ್ನು ಸಹ ಪದಾರ್ಥ ರೂಪದಲ್ಲಿ ಬಳಸದೆ ಪ್ರಸಾದೀಕರಿಸಬೇಕು. ಪಂಚೇಂದ್ರಿಯಗಳ ಸಹಜ ಗುಣವನ್ನು ಕಳೆದುಕೊಂಡು ಎಲ್ಲವೂ ದೈವೀಕರಣಗೊಂಡ ಸ್ಥಿತಿಯನ್ನು ಪಡೆದುಕೊಂಡು ಪಂಚವಿಂಶತಿ (ಇಪ್ಪತ್ತೈದು) ತತ್ತ್ವವಾಗಿರುವ ಈ ದೇಹದಲ್ಲಿ ಚನ್ನಬಸವಣ್ಣನು ಪರಮ ಸುಖಿಯಾಗಿದ್ದಾನೆ.

1282. ಪುಣ್ಯ ಪುರುಷ ಚನ್ನಬಸವಣ್ಣ.

ಪುಣ್ಯವುಳ್ಳ ಕಾಲಕ್ಕೆ ಹಗೆಗಳು ತನ್ನವರಹರು.
ಪುಣ್ಯವುಳ್ಳ ಕಾಲಕ್ಕೆ ಮಣ್ಣು ಹೊನ್ನಹುದು
ಪುಣ್ಯವುಳ್ಳ ಕಾಲಕ್ಕೆ ಹಾವು ಲೇವಳವಹುದು.
ಪುಣ್ಯವುಳ್ಳ ಕಾಲಕ್ಕೆ ಅನ್ಯರು ತನ್ನವರಹರು
ಇಂತಪ್ಪ ಪುಣ್ಯಗಳೆಲ್ಲವೂ ಭಕ್ತಿಯಿಂದಹುದು;
ಭಕ್ತಿ ಕೆಟ್ಟಡೆ ಪುಣ್ಯವು ಕೆಡುವುದು
ಇಂತಪ್ಪ ಭಕ್ತಿಯೂ ಪುಣ್ಯವು ಚನ್ನಬಸವಣ್ಣನಿಂದುಂಟಾಗಿ
ನಾನು ಬದುಕಿದೆನಯ್ಯಾ, ಲಿಂಗದೇವಾ.

ಪುಣ್ಯವು ತುಂಬಿ ಬಂದಾಗ ಶತ್ರುಗಳು ಮಿತ್ರರೂ, ಆಪ್ತರೂ ಆಗುತ್ತಾರೆ. ಮಣ್ಣು ಸಹ ಚಿನ್ನವಾಗುವುದು, ಎಸೆಯಲ್ಪಟ್ಟ ಹಾವು ಮುತ್ತಿನಹಾರ(ಲೇವಳ)ವಾಗುವುದು. ವಿರೋಧಿಗಳು, ಭಿನ್ನ ವಿಚಾರದವರು ಸಹ ತನ್ನವರಾಗುವರು. ಇಂಥ ಪುಣ್ಯವು ಭಕ್ತಿಯಿಂದ ಒದಗುವುದು. ಭಕ್ತಿ ಶಿಥಿಲವಾದಡೆ ಪುಣ್ಯವು ಕೆಡುವುದು. ಆದರೆ ಭಕ್ತಿ ಮತ್ತು ಪುಣ್ಯ ಎರಡೂ ಚನ್ನಬಸವಣ್ಣನಲ್ಲಿ ಅಂತರ್ಗತವಾಗಿರುವುದರಿಂದ ನಮಗೆ ಎಲ್ಲವೂ ಹಿತಕರವಾಗಿರುವುದು.

1283. ದೇವ ಪ್ರೇಮದಲ್ಲಿ ಬಂಧಿ.

ಭೂಮಿಯ ಸಾರಾಯದಲ್ಲೊಂದು ತರು ಬೆಳೆಯಿತ್ತು.
ನವರಸಫಲವನಿತ್ತಿತ್ತು ನೋಡಾ!
ಏನೆಂದರಿಯದೆ ಎಂತೆಂದರಿಯದೆ ಮರುಳಾದೆನು.
ನಾನು ಮಾರಾರಿಯ ಬಲೆಯಲ್ಲಿ ಸಿಲುಕಿದೆನಯ್ಯಾ
ಲಿಂಗದೇವಯ್ಯಾ
ಚನ್ನಬಸವಣ್ಣನಿಂದಲಾನು ಬದುಕಿದೆನು.

ಭಕ್ತಿ ಎಂಬ ಭೂಮಿಯ ಆಶ್ರಯದಲ್ಲಿ ಲಿಂಗ (ಜ್ಞಾನ) ಎಂಬ ತರುವು ಬೆಳೆಯಿತು. ಅದು ಬಗೆಬಗೆಯ ದಿವ್ಯಾನುಭವ ಎಂಬ ನವರಸ ಫಲಗಳನ್ನು ಕೊಟ್ಟಿತು. ಏನೆಂದರಿಯದೆ ಎಂತೆಂದರಿಯದೆ ತನ್ಮಯನಾಗಿಬಿಟ್ಟೆ. ನಾನು ಪರಮಾತ್ಮನ ಪ್ರೀತಿಯ ಬಲೆಯಲ್ಲಿ ಸಿಕ್ಕಿಬಿಟ್ಟೆ. ಲಿಂಗದೇವಾ, ಚನ್ನಬಸವಣ್ಣನಿಂದ ಎಚ್ಚರಗೊಂಡು ಲೋಕ ವ್ಯವಹಾರಕ್ಕೆ ಬಂದೆ.

ಆಧ್ಯಾತ್ಮಿಕ ಅನುಭಾವದಲ್ಲಿ ಸಾಧಕನು ತನ್ಮಯನಾದಾಗ ಲೋಕದ ಯಾವ ವ್ಯವಹಾರವೂ ಬೇಡವಾಗಿ, ಅದೇ ಸ್ಥಿತಿಯಲ್ಲಿ ಆನಂದಿಸಬಯಸುವನು. ಅಂತಹ ಸ್ಥಿತಿಯಲ್ಲಿ ಗುರುಬಸವಣ್ಣನವರು ಉಳಿದಾಗ ಅವರನ್ನು ಎಚ್ಚರಗೊಳಿಸಿ ಕರ್ತವ್ಯ ಮುಖಿಯಾಗುವಂತೆ ಚನ್ನಬಸವಣ್ಣನವರು ಮಾಡಿದ್ದಾರೆ.

1284. ಘನ ಪ್ರಸಾದಿ

ಪ್ರಸಾದಿಯ ಪ್ರಸಾದದಲೊದಗಿದ ಪ್ರಸಾದಿಯನು
ಏನೆಂದುಪಮಿಸುವೆನು. ?
ಮಹಾಪ್ರಸಾದಿಗೆ ಮಹಾಘನಪ್ರಸಾದವಾದ ಪ್ರಸಾದಿಯ?
ಅಗಮ್ಯ ಪ್ರಸಾದದಲ್ಲಿ ಸ್ವಾಯತವಾದ. ಲಿಂಗದೇವಾ,
ನಿಮ್ಮ ಶರಣ ಚನ್ನಬಸವಣ್ಣಂಗೆ ನಮೋ ನಮೋ ಎಂಬೆನು.

ಪ್ರಸಾದ, ಪ್ರಸಾದಿ ಎಂಬ ಪದಗಳನ್ನು ನಾಮಪದವಾಗಿ, ಕ್ರಿಯಾ ಪದವಾಗಿ ಬಹುಬಗೆಯಲ್ಲಿ ಇಲ್ಲಿ ಬಳಸಲಾಗಿದೆ.

ದೇವರು ಒಬ್ಬ ಪ್ರಸಾದಿ, ಭಕ್ತರ ಭಕ್ತಿ ಎಂಬ ಭೋಜನ ಸ್ವೀಕರಿಸುವ ಪ್ರಸಾದಿ ದೇವರು. ಅವನು ನೀಡುವ ಪ್ರಸಾದ ಎಂದರೆ ಅನುಗ್ರಹ (Grace). ಚನ್ನಬಸವಣ್ಣನವರು ದೇವನೆಂಬ ಪ್ರಸಾದಿಯ ಪ್ರಸಾದ(ಅನುಗ್ರಹ)ವನ್ನು ಪಡೆದು ಪ್ರಸಾದಿಯಾದವರು. ಇವರನ್ನು ಏನೆಂದು ಬಣ್ಣಿಸುವುದು? ಏನೆಂದು ಹೊಗಳುವುದು? ಮಹಾಪ್ರಸಾದಿಗೆ ಅಂದರೆ ದೇವನಿಗೆ ಮಹಾ ಪ್ರಸಾದವಾಗಿ ಅರ್ಪಣೆಯಾದ ಪ್ರಸಾದಿಯ ನಿಲುವನ್ನು ಹೇಗೆಂದು ಹೊಗಳುವದು? ಅಗಮ್ಯ ಪ್ರಸಾದವೆಂದರೆ ತನ್ನನ್ನು ತಾನು ದೇವನಿಗೆ ಸಮರ್ಪಿಸಿಕೊಂಡು ದೈವೀಕರಣಗೊಳ್ಳುವುದು. ಇಂಥ ಪ್ರಸಾದವನ್ನು ಅಳವಡಿಸಿಕೊಂಡ ನಿಮ್ಮ ಶರಣ ಚನ್ನಬಸವಣ್ಣನಿಗೆ ನಮೋ ನಮೋ ಎಂಬೆನು.

1285. ಬ್ರಹ್ಮಚಾರಿ ಚನ್ನಬಸವಣ್ಣನು.

ಪ್ರಾಣಲಿಂಗ ಪ್ರವೇಶಿತನಾಗಿ ಪ್ರಸಾದದಲ್ಲಿ ಸನ್ನಹಿತನಯ್ಯಾ
ಲಿಂಗಾರ್ಪಿತವಲ್ಲದೆ ಅನರ್ಪಿತವ ಮುಟ್ಟಲೀಯನಯ್ಯಾ
ಅಂಗಗುಣಂಗಳೆಲ್ಲವನತಿಗಳೆದು ಪ್ರಸಾದದಲ್ಲಿ ಬ್ರಹ್ಮಚಾರಿಯಾದನು
ಲಿಂಗದೇವರಲ್ಲಿ ಚನ್ನಬಸವಣ್ಣನು.

ಪ್ರಾಣಲಿಂಗ ಪ್ರವೇಶಿತ ಎಂದರೆ ಆತ್ಮಲಿಂಗದ ಅನುಭೂತಿ ಹೊಂದಿದವನು. ಪ್ರಾಣಲಿಂಗವನ್ನು ಸಾಕ್ಷಾತ್ಕರಿಸಿಕೊಂಡು ಪ್ರಸಾದ ತತ್ತ್ವವನ್ನು ಅಳವಡಿಸಿಕೊಂಡವನು. ಪ್ರತಿಯೊಂದು ಪದಾರ್ಥವನ್ನು, ವಸ್ತುವನ್ನು ಲಿಂಗಾರ್ಪಿತ ಮಾಡದೆ ಬಳಸುವವನಲ್ಲ. ಅನರ್ಪಿತವಾದುದನ್ನು ಮುಟ್ಟಲಾರನು. ಶರೀರ ಗುಣ, ಮನದ ಗುಣಗಳನ್ನು ಗೆದ್ದು ಪ್ರಸಾದದಲ್ಲಿ ತದ್ಗತನಾಗಿ ಬ್ರಹ್ಮಚಾರಿಯಾದನು ಚನ್ನಬಸವಣ್ಣನು.

1286. ಪ್ರಾಣಲಿಂಗ ಪಥ

ಕೃತಯುಗ, ತ್ರೇತಾಯುಗ, ದ್ವಾಪರಯುಗ, ಕಲಿಯುಗಂಗಳು
ಭವರಾಟಳದಲ್ಲಿ ತಿರುಗುತ್ತಿಪ್ಪಲ್ಲಿ
ಅನಂತ ಕೋಟ್ಯನುಕೋಟಿ ಯುಗಂಗಳು ಮಡಿದುಹೋದವು
ಅನಂತ ಜಲಪ್ರಳಯಂಗಳು ಸರಿದು ಹೋದವು
ಹದಿನಾಲ್ಕು ಲೋಕಂಗಳುಳ್ಳ ಅನಂತಕೋಟಿ ಬ್ರಹಾಂಡಗಳೆಲ್ಲ
ಲಯವಾಗಿ ಹೋದವು
ಇದರೊಳಗೆ-ಆವ ಲೋಕದಲ್ಲಿ ಆವ ಯುಗದಲ್ಲಿ
ಪ್ರಾಣಲಿಂಗ ಲಿಂಗಪ್ರಾಣವೆಂಬ ಭೇದವನರುಹಿದವರಾರು ಹೇಳಾ,
ಗಂಗೆ ಗೌರಿ ವಲ್ಲಭರು ಮೊದಲಾದ ಅನಂತಕೋಟಿ
ರುದ್ರಾದಿಗಳೆಲ್ಲರೂ
ಪ್ರಾಣಲಿಂಗ ಸಂಬಂಧದ ಹೊಲಬನರಿಯದೆ
ಅಣಿಮಾದಿ ಚತುರ್ವಿಧ ಫಲಪ್ರಾಪ್ತಿಗೆ ಒಳಗಾದರು.
ಶಿವಾಚಾರದ ವಿಚಾರವನರಿಯದೆ ಜಗವು ಕೆಟ್ಟುಹೋಹುದೆಂದು

ಪರಮ ಪುರುಷಾರ್ಥ ಕಾರಣವಾಗಿ ಮರ್ತ್ಯದಲ್ಲಿ ಅವತರಿಸಿ
ಗುರುಲಿಂಗಜಂಗಮಪಾದೋದಕ ಪ್ರಸಾದವೆಂಬ
ಪಂಚಾಚಾರಸ್ಥಲವ ನೆಲೆಗೊಳಿಸಿ
ಷಡುಸ್ಥಲವೆಂಬ ಮಹಾನುಭಾವಮಂ
ಕರತಳಾಮಳಕವಾಗಿ ಸ್ಥಿತಗೊಳಿಸಿ,
ಪ್ರಾಣಲಿಂಗ, ಲಿಂಗಪ್ರಾಣವೆಂಬ ಭೇದವನೆನಗೆ ತಿಳುಹಿ
ಎನ್ನ ಭ್ರಾಂತಿಸೂತಕವ ಬಿಡಿಸಿ
ಲಿಂಗೈಕ್ಯವೆಂಬುದನೆನಗೆ ತೋರಿದೆಯಾಗಿ
ನಿನ್ನಿಂದಲಾನು ಸಂಗನಬಸವಣ್ಣನೆಂಬ ಹೆಸರುವಡೆದೆನು
ಲಿಂಗದೇವಾ ನೀ ಸಾಕ್ಷಿಯಾಗಿ !

ಕೃತಯುಗ, ತ್ರೇತಾಯುಗ, ದ್ವಾಪರಯುಗ, ಕಲಿಯುಗಗಳು ಹಲವು ಬಾರಿ ತಿರುಗಿರುಗಿ ಬರುತ್ತಿರುವಾಗ, ಅನೇಕ ಕೋಟ್ಯನುಕೋಟಿ ಯುಗಗಳು ದಾಟಿ ಹೋದವು. ಅನೇಕ ಜಲಪ್ರಳಯಗಳು ಆಗಿ ಹೋದವು. ಹದಿನಾಲ್ಕು ಲೋಕಗಳನ್ನು ಒಳಗೊಂಡ ಅನಂತ ಕೋಟಿ ಬ್ರಹ್ಮಾಂಡಗಳೆಲ್ಲ ಲಯವಾಗಿ ಹೋದವು. ಹೀಗಿರುವಾಗ ಯಾವ ಲೋಕದಲ್ಲಿ-ಯಾವ ಯುಗದಲ್ಲಿ ಪ್ರಾಣಲಿಂಗಾನುಸಂಧಾನ ಕುರಿತು ಹೇಳಲಾಗಿದೆ. ಬಹಿರಂಗದ ಪೂಜೆಗಿಂತ ಅಂತರಂಗದ ಪ್ರಾಣಲಿಂಗಾನುಸಂಧಾನ ಮುಖ್ಯ 'ಲಿಂಗವೇ ಪ್ರಾಣವಾಗಬೇಕು. ಪ್ರಾಣವೇ ಲಿಂಗವಾಗಬೇಕು'. ಎಂಬ ತತ್ತ್ವವನ್ನು ಹೇಳಿದವರಾರು ? ಗಂಗೆ-ಗೌರಿ ವಲ್ಲಭರಾದಿಯಾಗಿ ಅನಂತ ಕೋಟಿ ರುದ್ರರೆಲ್ಲರೂ ಪ್ರಾಣಲಿಂಗ ಸಾಧನೆಯ ಹಾದಿಯನರಿಯದೆ ಅಣಿಮಾದಿ ಅಷ್ಟಸಿದ್ಧಿಗಳು, ಚತುರ್ವಿಧ ಫಲ ಪದವಿಗೆ ಆಸೆಪಟ್ಟರು.

ಶಿವಾಚಾರ ಅರ್ಥಾತ್ ಸಮತಾವಾದವನರಿಯದೆ ಜಗವು ಕೆಟ್ಟು ಹೋಗುವುದೆಂದು ಘನ ಉದ್ದೇಶದಿಂದ ಭೂಮಿಗೆ ಅವತರಿಸಿ, ಗುರುಲಿಂಗಜಂಗಮ ಪಾದೋದಕ ಪ್ರಸಾದ ಎಂಬ ಐದು ತತ್ತ್ವಗಳ ಪಂಚಾಚಾರ ಮಾರ್ಗವನ್ನು ನೆಲೆಗೊಳಿಸಿ, ಷಡುಸ್ಥಲವೆಂಬ ಅನುಭಾವದ ತತ್ತ್ವವನ್ನು ಕರತಳಾಮಳಕವಾಗಿ ಮಾಡಿ, ಪ್ರಾಣವೇ ಲಿಂಗವಾಗಬೇಕು ಲಿಂಗವೇ ಪ್ರಾಣವಾಗಬೇಕು ಎಂಬುದನ್ನು ತಿಳಿಸಿ, ಬಹು ಬಗೆಯು ಭ್ರಾಂತಿಗಳನ್ನು ಬಿಡಿಸಿ, ಲಿಂಗೈಕ್ಯವಾಗುವ ವಿದ್ಯೆಯನ್ನು ತಿಳಿಸಿಕೊಟ್ಟೆ. ಹೀಗಾಗಿ ಲಿಂಗದೇವಾ, ಸಂಗನ ಬಸವಣ್ಣ ಎಂಬ ಹೆಸರು ನಿನ್ನಿಂದ ನನಗೆ ಬಂದಿತು, ಇದಕ್ಕೆ ನೀನೆ ಸಾಕ್ಷಿ.

ಆತ್ಮಕಥೆಯಂತಿರುವ ಈ ವಚನವು ಅನೇಕ ಸಂಗತಿಗಳನ್ನು ಬಯಲುಗೊಳಿಸುತ್ತದೆ.

1. ಲಿಂಗಾಯತ ಧರ್ಮದಲ್ಲಿರುವಂತೆ ಕೆಲವು ತತ್ತ್ವಗಳು ಬೇರೆ ಯಾವುದರಲ್ಲೂ ಇಲ್ಲ .
2. ಇಷ್ಟಲಿಂಗದ ಮೂಲಕ ಪ್ರಾಣಲಿಂಗ ಮತ್ತು ಭಾವಲಿಂಗಗಳ ಸಾಧನೆ ಈ ಧರ್ಮದ ವೈಶಿಷ್ಟ್ಯ.
3. ಶಿವಾಚಾರ-ಸಮತಾವಾದವನ್ನು ಬೋಧಿಸಲಿಕ್ಕೆ ಈ ಧರ್ಮ ಹುಟ್ಟಿದೆ.
4. ಜಗತ್ತು ಕೆಟ್ಟು ಹೋಗಬಾರದೆಂದು ಗುರು ಬಸವಣ್ಣನವರ ಅವತಾರವಾಗಿದೆ.
5. ಗುರುಲಿಂಗಜಂಗಮ ಪದೋದಕ ಪ್ರಸಾದ ಎಂಬ ತತ್ತ್ವಗಳು ಈ ಧರ್ಮದ ಪ್ರಮುಖ ಆಚಾರ. ಈ ಪಂಚಾಚಾರ ಮತ್ತು ಷಡುಸ್ಥಲಗಳನ್ನು ಕೊಟ್ಟವರು ಗುರು ಬಸವಣ್ಣನವರು.
6. ಮೂಢನಂಬಿಕೆಯ ಭ್ರಾಂತಿ ಇಲ್ಲದ ಮಾರ್ಗವಿದು.
7. ಈ ಧರ್ಮದ ಲಿಂಗೈಕ್ಯ ಪ್ರಕ್ರಿಯೆ ಬಹಳ ವಿಶೇಷವಾದುದು.
8. ಈ ಎಲ್ಲ ತತ್ತ್ವಗಳನ್ನೂ ಲಿಂಗದೇವನ ಪ್ರೇರಣೆ (ಅನುಗ್ರಹ)ಯಿಂದ ಗುರು ಬಸವಣ್ಣನವರು ಕೊಟ್ಟು 'ಸಂಗನ ಬಸವಣ್ಣ' ಎಂದು ಖ್ಯಾತಿ ಪಡೆದಿದ್ದಾರೆ.

1287. ಅಪ್ರತಿಮ ಶಿಷ್ಯ

ನಾನಾ ಸ್ಥಾನದಲ್ಲಿ ಬಂದು ತೊಳಲಿ ಬಳಲಿ
ಅಳಿದಳಿದು ನಿಂದ ನಿಲವಿನವನಲ್ಲ
ಮರ್ತ್ಯಲೋಕದಲ್ಲಿ ಶಿವಾಚಾರದ ಘನವು ಹೂಳಿಹೋಯಿತ್ತೆಂದು
ಕರ್ತನು ತಾನೆ ಮಹಾಪ್ರಸಾದಿಯಾಗಿ ಉದಯವಾದನು
ಹಸ್ತಮಸ್ತಕ ಸಂಯೋಗವಿಲ್ಲದ ಮುನ್ನವೆ
ಆದಿ ಗುರು ಅನಾದಿ ಶಿಷ್ಯನೆಂಬುದ ನೆಲೆ ಮಾಡಿ
ಸಂಗಮನಾಥನೆಂಬ ಲಿಂಗವನೆನ್ನ ಕೈಯಲ್ಲಿ ಕೊಟ್ಟು
ಸಾಮದಿಂದ ಅನುಗ್ರಹಿಸಿಕೊಂಡನು.
ಎನ್ನ ಹಿಂದಣ ಪೂರ್ವಾಪರವನೆತ್ತಿ ತೋರಿ ತನ್ನತ್ತ ತೆಗೆದುಕೊಂಡನು
ಲಿಂಗದೇವರಲ್ಲಿ ಚನ್ನಬಸವಣ್ಣನು.

ನಾನಾ ಜನ್ಮಗಳಲ್ಲಿ ಪಾಪ ಪುಣ್ಯಗಳ ಜಂಜಡಕ್ಕೆ ಸಿಕ್ಕಿ ಬಳಲಿ ಬಂದು ನಿಂತಂತಹ ವ್ಯಕ್ತಿಯಲ್ಲ. ಘನವಾದ ಉದ್ದೇಶ ಹೊತ್ತು ಅವತರಿಸಿದ ಮಹಾನುಭಾವ. ಮರ್ತ್ಯಲೋಕದಲ್ಲಿ ಶಿವಾಚಾರದ ಅಂದರೆ ಸಮತಾವಾದದ ತತ್ತ್ವವು ನಶಿಸಿಹೋಗುತ್ತಿರುವುದರಿಂದ ಸ್ವತಃ ಸೃಷ್ಟಿಕರ್ತನೇ ಚನ್ನಬಸವಣ್ಣನೆಂಬ ಮಹಾಪ್ರಸಾದಿಯಾಗಿ ಜನ್ಮ ತಾಳಿದ್ದಾನೆ. ಇನ್ನೂ ಎಳೆಯನಿರುವ ಕಾರಣ ನಂತರ ಹಸ್ತಮಸ್ತಕ ಸಂಯೋಗದಿಂದ ದೀಕ್ಷೆ ಮಾಡೋಣ ಎಂದು ನಾವು ವಿಚಾರ ಮಾಡಿದ್ದರೆ ಈತ ಹಸ್ತಮಸ್ತಕ ಸಂಯೋಗವಾಗುವ ಮುನ್ನವೇ ಮಹಾಜ್ಞಾನಿಯಾಗಿದ್ದಾನೆ. ಇದರಿಂದ ಗುರುವಿಗಿಂತಲೂ ಮುಂದೆ ಶಿಷ್ಯ ಎಂಬ ತತ್ತ್ವ ಸಾಬೀತಾಗುತ್ತದೆ.

ತನ್ನ ಇಷ್ಟಲಿಂಗವನ್ನು ನನ್ನ ಕೈಯಲ್ಲಿ ಕೊಟ್ಟು ನಾನು ದೃಷ್ಟಿಯಾರೆ ನೋಡಿ ಕೊಡುವಂತೆ ಬುದ್ಧಿವಂತಿಕೆಯಿಂದ ಅನುಗ್ರಹ ಪಡೆದುಕೊಂಡನು. ನಾನು ಪಾಪ ಪುಣ್ಯಗಳ ಬಂಧನದಿಂದ ಹುಟ್ಟಿ ಬರದೆ ಮಹದುದ್ದೇಶದಿಂದ ಹುಟ್ಟಿ ಬಂದವನು ಎಂಬುದನ್ನು ಎತ್ತಿ ತೋರಿ ತನ್ನ ಕಡೆಗೆ ಒಲಿಸಿಕೊಂಡನು ಲಿಂಗದೇವರಲ್ಲಿ ಚನ್ನಬಸವಣ್ಣನು.

1288. ಜ್ಞಾನದಿಂದ ಮೋಕ್ಷ

ಇಂದ್ರ, ವ್ಯಾಸ, ಉಪೇಂದ್ರನ ಒಲಗ
ಚಂದ್ರಮೌಳಿಯನರಿದೆ ಹೋಯಿತ್ತು.
ಬಂಧಮೋಕ್ಷದ ಭವಬಂಧನ ಬಿಡದನ್ನಕ್ಕರ
ಮತ್ತೊಂದರ ಮುಖ ಜನಿಸಿತಲ್ಲಾ. ಲಿಂಗದೇವಾ.
ಚನ್ನಬಸವಣ್ಣನ ಸನ್ನಿಧಿಯಿಂದ ನಾನು ಬದುಕಿದೆನು.

ಇಂದ್ರ, ವ್ಯಾಸ, ಉಪೇಂದ್ರ ಮೊದಲಾದವರೆಲ್ಲ ಆತ್ಮಜ್ಞಾನಿಗಳಾಗದೆ, ಕರ್ತನನ್ನರಿಯದೇ ಪೌರಾಣಿಕ ವ್ಯಕ್ತಿ ಚಂದ್ರಮೌಳಿಯನ್ನು ಆರಾಧಿಸುವುದರಲ್ಲೇ ಅವರ ಸಾಧನೆಯು ಮುಗಿಯಿತು. ಜನ್ಮಜನ್ಮಾಂತರದ ಬಂಧನ ಬಿಡುಗಡೆಯಾಗಬೇಕು ಎಂದು ಪ್ರಯತ್ನ ಮಾಡದಿದ್ದರೆ ಪುನಃ ಜನ್ಮ ಬರುವುದು ಖಚಿತ. ನಾನು ಮಾತ್ರ ಚನ್ನಬಸವಣ್ಣನ ಸನ್ನಿಧಿಯಿಂದ ಭವವನ್ನು ಗೆದ್ದೆ.

1289. ನಿಂದೆ ಮಹಾಪಾಪ

ಲಿಂಗವಿದ್ದಲ್ಲಿ ನಿಂದೆ ಇರದು. ನಿಂದೆಯಿದ್ದಲ್ಲಿ ಲಿಂಗವಿರದು.
ಅವರೆಂತಿದ್ದಡೇನು ಹೇಗಿದ್ದಡೇನು ಲಿಂಗವಂತರವರು
ಉಪಮಿಸಬಾರದ ಮಹಾಘನವು ಲಿಂಗದೇವನ ಶರಣರು.

ಇಷ್ಟಲಿಂಗ ಪೂಜಕರು ನಿಂದೆ ಮಾಡಬಾರದು. ಲಿಂಗವಿದ್ದಲ್ಲಿ ನಿಂದೆ ಇರಬಾರದು. ನಿಂದೆ ಇದ್ದಲ್ಲಿ ಪರಮಾತ್ಮನಿರನು. ಸಹ ಧರ್ಮಿಗಳೊಡನೆ ವ್ಯವಹರಿಸುವಾಗ ಸಣ್ಣಪುಟ್ಟ ಲೋಪದೋಷಗಳನ್ನು ಕಂಡು ನಿಂದಿಸುತ್ತಿರಬಾರದು. ಲಿಂಗದೇವನ ಶರಣರು ಜ್ಞಾನಿಗಳು, ಉಪಮಾತೀತರು, ಸದ್ಗುಣಿಗಳು ಆಗಿರುತ್ತಾರೆ.

(ಮುಂದುವರಿಯುವುದು....)

ವಿಶ್ವಗುರು ಬಸವಣ್ಣನವರ ಅಂಚೆ ಚೀಟಿ ಬಿಡುಗಡೆ – ಒಂದು ನೆನಪು

– ಪೂಜ್ಯ ಚನ್ನಬಸವಾನಂದ ಸ್ವಾಮೀಜಿ

ರಾಷ್ಟ್ರದ ಸ್ವಾತಂತ್ರ್ಯದ ಸುವರ್ಣ ಮಹೋತ್ಸವ ವರ್ಷದಲ್ಲಿ ಮಾನವ ಕುಲದ ಸ್ವಾತಂತ್ರ್ಯ ಮತ್ತು ಸಮಾನತೆಗಾಗಿ ಹೋರಾಡಿ ಕ್ರಾಂತಿಪುರುಷ ಬಸವಣ್ಣನವರ ಅಂಚೆ ಚೀಟಿಯು ಅವರ 801ನೆಯ ಲಿಂಗೈಕ್ಯ ಸಂಸ್ಮರಣಾ ಕಾರ್ಯಕ್ರಮದಲ್ಲಿ ರಾಷ್ಟ್ರದ ರಾಜಧಾನಿ ದೆಹಲಿಯಲ್ಲಿ ಬಿಡುಗಡೆ ಯಾದುದು ಅವಿಸ್ಮರಣೀಯ ಸಂಗತಿ. ಕರ್ನಾಟಕದ ಕುಲಪುರುಷ, ಭಾರತದ ಮೊಟ್ಟ ಮೊದಲ ಸ್ವತಂತ್ರ ವಿಚಾರವಾದಿ, ಜಗತ್ತಿನ ಪ್ರಥಮ ಸಮತಾವಾದಿ, ದಲಿತೋದ್ಧಾರಕ, ಸ್ತ್ರೀ ಸಮಾನತಾ ಪ್ರತಿಪಾದಕ ಬಸವಣ್ಣನವರು 62ವರ್ಷ 3 ತಿಂಗಳು 2 ದಿವಸಗಳ ಕಾಲ ಇಳೆಯ ಮೇಲಿದ್ದು, ಉರಿಯಿಂಡ ಕರ್ಪೂರದಂತೆ ನಳನಾಮ ಸಂವತ್ಸರದ ಶ್ರಾವಣ ಶುದ್ಧ ಪಂಚಮಿಯ ದಿನದಂದು (ದಿ.30-7-1196) ಲಿಂಗದೇವನಲ್ಲಿ ಒಂದಾದರು. ಈ ಲಿಂಗೈಕ್ಯ ಅಷ್ಟಶತಮಾನೋತ್ಸವವನ್ನು 1996ರ ಶ್ರಾವಣ ಪಂಚಮಿಯಿಂದ ಒಂದು ವರ್ಷಕಾಲ ರಾಜ್ಯಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲೂ ಆಚರಿಸಬೇಕೆಂದು 800ನೆಯ ಲಿಂಗೈಕ್ಯ ದಿನದಂದು 19-8-1996 ಸಂಕಲ್ಪಿಸ ಲಾಯಿತು. ಈ ವಿಷಯವನ್ನು ಭಾರತ ಸರ್ಕಾರದ ಅಂಚೆ ಇಲಾಖೆಯ ಗಮನಕ್ಕೆ ತಂದು ಬಸವ ಧರ್ಮದ ಮಹಾಜಗದ್ಗುರು ಪೀಠಾಧ್ಯಕ್ಷೆ ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ ಯವರು ನವೆಂಬರಿನಲ್ಲಿ ಪತ್ರ ವ್ಯವಹಾರವನ್ನು ಆರಂಭಿಸಿದರು. ಅಂಚೆ ಇಲಾಖೆ ಹಲವಾರು ಬಗೆಯ ಮಾಹಿತಿಯನ್ನು ಕೇಳಿತು.ಅದನ್ನೆಲ್ಲ ಒದಗಿಸಿದ್ದಲ್ಲದೆ ಬೇರೆ ಬೇರೆ ಚಿತ್ರಗಳನ್ನೂ ಸಿದ್ಧಪಡಿಸಿ ಪೂಜ್ಯ ಮಾತಾಜಿಯವರು ದೆಹಲಿಗೆ ಕಳಿಸಿದರು. ಈ ಪ್ರಯತ್ನದ ಫಲಶ್ರುತಿಯಾಗಿ ಅಂಚೆ ಇಲಾಖೆ ಅಂಚೆ ಚೀಟಿಯನ್ನು ಬಿಡುಗಡೆ ಮಾಡಲು ನಿರ್ಧರಿಸಿತಲ್ಲದೆ, ಬಿಡುಗಡೆ ಸಮಾರಂಭ ವನ್ನು ಏರ್ಪಡಿಸಿಕೊಳ್ಳಬಹುದೆಂದು ತಿಳಿಸಿತು. ಅದರಂತೆಯೇ ದಿ.8-8-1997ರಂದು ಅಂಚೆ ಚೀಟಿಯ ಬಿಡುಗಡೆ ವರ್ಣರಂಜಿತವಾಗಿ ನೆರವೇರಿತು.

ನವದೆಹಲಿಯ ಚಾಣಕ್ಯಪುರಿಯ ಕೌಟಿಲ್ಯ ಮಾರ್ಗದಲ್ಲಿರುವ ಕರ್ನಾಟಕ ಭವನದಲ್ಲಿ ಅಂಚೆ ಚೀಟಿಯನ್ನು ದೆಹಲಿಯ ವಿಭಾಗದ ಚೀಫ್ ಪೋಸ್ಟ್‌ಮಾಸ್ಟರ್ ಜನರಲ್ ಶ್ರೀ.ಚಡ್ಡಾ ರವರು, ಪೋಸ್ಟ್‌ಮಾಸ್ಟರ್ ಜನರಲ್ ಶ್ರೀಮತಿ.ಜೆ.ದೀಪ್‌ರವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್ ಸಂಸ್ಥೆಯು ಕಾರ್ಯಕ್ರಮದ ವ್ಯವಸ್ಥೆ ಯನ್ನು ಮಾಡಿದ್ದಿತು. ಸಂಜೆ 5-30ಕ್ಕೆ ಬಸವ ಧ್ವಜಾರೋಹಣದೊಡನೆ ಕಾರ್ಯಕ್ರಮವು ಪ್ರಾರಂಭವಾಯಿತು. ಮಹಾರಾಷ್ಟ್ರದ ರಾಷ್ಟ್ರೀಯ ಬಸವದಳದ ಕಾರ್ಯಾಧ್ಯಕ್ಷೆ ಶರಣೆ.ಮಾಲೂ ತಾಯಿ ಚಂದ್ರಕಾಂತ ಸ್ವಾಮಿಯವರು ಬಸವ ಧ್ವಜಾರೋಹಣ ನೆರವೇರಿಸಿದರು. ಮಂತ್ರಪುರುಷ ಬಸವಣ್ಣನವರ ಭಾವಚಿತ್ರದ ಪೂಜೆಯನ್ನು ಪೋಸ್ಟ್‌ಮಾಸ್ಟರ್ ಜನರಲ್ ಶ್ರೀಮತಿ.ದೀಪ್‌ರವರು ನೆರವೇರಿಸಿದರು. ಪೂಜ್ಯ ಶ್ರೀ ಮಹಾ ಜಗದ್ಗುರು ಮಾತೆ ಮಹಾದೇವಿಯವರು ಪ್ರಾರ್ಥನೆಯನ್ನು ಮಾಡಿಸಿದರು. ಮತ್ತು ವಿಶ್ವಗುರು ಬಸವಣ್ಣನವರ 801ನೆಯ ಲಿಂಗೈಕ್ಯ ಸಂಸ್ಮರಣಾ ಕಾರ್ಯ ಕ್ರಮವನ್ನು ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿದರು. "12ನೆಯ ಶತಮಾನದಲ್ಲಿ ಆಗಿ ಹೋದ ವಿಶ್ವಗುರು ಬಸವಣ್ಣನವರು ಸೃಷ್ಟಿಕರ್ತನು ಮಾನವ ಕುಲದ ಇತಿಹಾಸದ ಭಿತ್ತಿಯ ಮೇಲೆ ತನ್ನ ಕಾರುಣ್ಯಕುಂಚದಿಂದ ಚಿತ್ರಿಸಿದ ಅಪೂರ್ವ ಕಲಾಕೃತಿ, ಜಗತ್ತಿನ ಮೊಟ್ಟ ಮೊದಲ

ಸಮಾಜವಾದಿ, ಸಮತಾವಾದಿ. ಅವರು ಸ್ಥಾಪಿಸಿದ ಅನುಭವ ಮಂಟಪ ಜಗತ್ತಿನ ಮೊಟ್ಟ ಮೊದಲ ಲೋಕಸಭೆ ಎನ್ನಿಸಿಕೊಳ್ಳಬಲ್ಲದು. ಎಂಟು ಶತಮಾನಗಳ ಹಿಂದೆಯೇ ಬಸವಣ್ಣನವರು ಪ್ರಜಾಪ್ರಭುತ್ವದ ಮೌಲ್ಯಗಳಾದ ಸ್ವಾತಂತ್ರ್ಯ, ಸಮಾನತೆ, ಸಹೋದರತ್ವ ಕುರಿತು ಬೋಧಿಸಿದರಲ್ಲದೆ ಅನುಭವ ಮಂಟಪದಲ್ಲಿ ವಿಚಾರ,ವಾಕ್ ಮತ್ತು ಆಚಾರ ಸ್ವಾತಂತ್ರ್ಯಗಳನ್ನು ನೀಡಿದ್ದರು. ಸ್ತ್ರೀ ಸಮಾನತಾ ಪ್ರತಿಪಾದಕರಾದ ಬಸವಣ್ಣನವರು ಸಮಾಜದಲ್ಲಿ ಅನೇಕ ಬದಲಾವಣೆಗಳನ್ನು ತಂದರು. ವಿಧವೆಯರ ಪುನರ್ವಿವಾಹ, ಮಹಿಳೆಯರ ಸಾಮಾಜಿಕ –ಧಾರ್ಮಿಕ–ಸ್ಥಾನಮಾನ ಏರಿಕೆಗಳಿಂದಾಗಿ ಮಹಿಳಾ ಕುಲವು ಸಾಕಷ್ಟು ಪ್ರಗತಿಯನ್ನು ಸಾಧಿಸುವಂತಾಯಿತು. ಅನುಭವ ಮಂಟಪವು ಕಾಶ್ಮೀರದಿಂದ ಕನ್ಯಾಕುಮಾರಿಯವರೆಗಿನ ಭೂಭಾಗದಿಂದೆಲ್ಲ ಅನೇಕ ಸಾಧಕರನ್ನು, ಸಿದ್ಧಪುರುಷರನ್ನು ಆಕರ್ಷಿಸಿತು. ವಚನ ಸಾಹಿತ್ಯವೆಂಬ ಅಮೂಲ್ಯ ಧಾರ್ಮಿಕ –ಸಾಮಾಜಿಕ ಸಂವಿಧಾನವೊಂದನ್ನು ಕಾಣಿಕೆಯಾಗಿ ನೀಡಿತು." ಎಂದು ಉದ್ಘಾಟನಾ ಭಾಷಣದಲ್ಲಿ ಹೇಳಿದರು. ನಂತರ ಚೀಫ್ ಪೋಸ್ಟ್‌ಮಾಸ್ಟರ್ ಜನರಲ್ ಶ್ರೀ.ಎಸ್.ಚೆಡ್ಡಾರವರು ಬಸವಣ್ಣನವರ ಅಂಚೆ ಚೀಟಿ, ಪರಿಚಯ ಪುಸ್ತಿಕೆ ಮತ್ತು ಬಹುವರ್ಣರಂಜಿತ ಕವರ್‌ಗಳನ್ನು ಅಂಟಿಸಿದ ಆಲ್ಬಮ್ ಅನ್ನು ಬಿಡುಗಡೆ ಮಾಡಿ, ಇದರ ಪ್ರೇರಕ ಶಕ್ತಿಯಾದ ಪೂಜ್ಯ ಮಾತಾಜಿಯವರಿಗೆ ಸಮರ್ಪಿಸಿದರು. "ಹನ್ನೆರಡನೆಯ ಶತಮಾನದಲ್ಲಿ ಆಗಿಹೋದ ಬಸವಣ್ಣನವರು ಇಪ್ಪತ್ತನೇ ಶತಮಾನಕ್ಕಿಂತಲೂ ಮುಂದೆ ಇದ್ದವರು. ಅವರು ಸಂತರಷ್ಟೇ ಅಲ್ಲದೆ ಸಮಾಜ ಸುಧಾರಕರೂ ಆಗಿರುವುದು ಬಹಳ ಗಮನಾರ್ಹ. ದೀನದಲಿತರ ಉದ್ಧಾರಕ್ಕಾಗಿ ಮತ್ತು ಸಮಾಜದಲ್ಲಿ ಬೇರು ಬಿಟ್ಟಿದ್ದ ಮೂಢನಂಬಿಕೆ, ಕಂದಾಚಾರಗಳ ವಿರುದ್ಧ ಅವರು ಕೈಗೊಂಡ ಹೋರಾಟ ನನಗೆ ಬಹಳ ಮೆಚ್ಚುಗೆಯಾಗಿದೆ. ಬಸವೇಶ್ವರರ ಲಿಂಗೈಕ್ಯ ಅಷ್ಟಶತಮಾನೋತ್ಸವದ ನಿಮಿತ್ತ ಅಂಚೆ ಇಲಾಖೆಯು ಅಂಚೆ ಚೀಟಿಯನ್ನು ಬಿಡುಗಡೆ ಮಾಡಿ ಆ ಮಹಾಚೇತನಕ್ಕೆ ಗೌರವ ಸಲ್ಲಿಸಲು ಸಾಧ್ಯವಾದುದಕ್ಕೆ ನಮಗೆ ತುಂಬಾ ಸಂತೋಷವಾಗಿದೆ. ಸಂತೋಷ ಮತ್ತು ಧನ್ಯತಾ ಭಾವದಿಂದ ನಾನು ಈ ಚೀಟಿಯನ್ನು ಬಿಡುಗಡೆ ಮಾಡಿದ್ದೇನೆ."ಎಂದು ನುಡಿದರು. ಜವಾಹರ್‌ಲಾಲ್ ನೆಹರೂ ವಿಶ್ವವಿದ್ಯಾಲಯದಿಂದ ಪ್ರೊಫೆಸರ್ ಶ್ರೀಮತಿ. ಶಾಂತಾ ಕೃಷ್ಣನ್ ಉಪನ್ಯಾಸ ಮಾಡಿದರು. ಹಿಂದುಳಿದ ವರ್ಗಗಳ ಆಯೋಗ ದ ಸದಸ್ಯ–ಕಾರ್ಯದರ್ಶಿ ಶ್ರೀ.ಪಿ.ಎಸ್.ಕೃಷ್ಣನ್, ಐ.ಎ.ಎಸ್ ಅವರು ಬಸವಣ್ಣನವರ ಬಹುಮುಖ ವ್ಯಕ್ತಿತ್ವ, ಸಾಧನೆಯ ಬಗ್ಗೆ ಮಾತನಾಡಿದರಲ್ಲದೆ "ಎಂಟು ಶತಮಾನಗಳ ಹಿಂದೆಯೇ ಬ್ರಾಹ್ಮಣ ಕನ್ಯೆ ಮತ್ತು ದಲಿತರ ಯುವಕನ ಮಧ್ಯೆ ವಿವಾಹವನ್ನು ಮಾಡಿಸಿದ್ದು ಸಾಮಾನ್ಯ ಸಾಧನೆಯಲ್ಲ. ಬಸವಣ್ಣನವರ ಸಂದೇಶವು ಇಡೀ ಭಾರತಕ್ಕೆ ಅತ್ಯಂತ ಅಗತ್ಯವಾಗಿ ಬೇಕಾಗಿದೆ. ಈ ಸಂದರ್ಭದಲ್ಲಿ ಪೂಜ್ಯ ಮಾತಾಜಿಯವರಲ್ಲಿ ನಾನು ಕಳಕಳಿಯಿಂದ ವಿನಂತಿಸುತ್ತೇನೆ. ರಾಷ್ಟ್ರದ ರಾಜಧಾನಿ ದೆಹಲಿಯಲ್ಲಿ ಬಸವಣ್ಣನವರ ಒಂದು ಸ್ಮಾರಕವಾಗಬೇಕು ಮತ್ತು ಅನುಭವ ಮಂಟಪದ ಪ್ರಮುಖ ಶರಣರ ಪುತ್ಥಳಿಗಳನ್ನು ಸ್ಥಾಪಿಸಿ ಸಂದರ್ಶನೀಯ ಸ್ಥಳವೊಂದನ್ನು ರೂಪಿಸಬೇಕು. ಇದಕ್ಕೆ ನಮ್ಮೆಲ್ಲರ ಸಂಪೂರ್ಣ ಸಹಕಾರವಿದೆ. ಕೂಡಲ ಸಂಗಮದಲ್ಲಿ ಇಂಥ ಒಂದು ಶರಣಲೋಕವು ಸೃಷ್ಟಿಯಾಗ ಲಿರುವ ಬಗ್ಗೆ ಕೇಳಿದ್ದೇನೆ, ಭಾವಚಿತ್ರ ನೋಡಿದ್ದೇನೆ. ದೆಹಲಿಯಲ್ಲಿ ಅಂಥದು ಆದಾಗ ಬಸವಣ್ಣನವರ ದಿವ್ಯ ಸಂದೇಶವು ಭಾರತದ ಮೂಲೆ ಮೂಲೆಗೆ ಮುಟ್ಟಬಲ್ಲುದು" ಎಂದು ಹೇಳಿದರು.

ಅಧ್ಯಕ್ಷೀಯ ಭಾಷಣ ಮಾಡುತ್ತ ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಮಹಿಳಾ ಜಗದ್ಗುರು ಪೀಠದ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ನುಡಿದರು: "ವಿಶ್ವಗುರು ಬಸವಣ್ಣನವರ ಪರಿಚಯ ಇಷ್ಟು ಹೊತ್ತಿಗೆ ಅಖಂಡ ಭಾರತಕ್ಕೆ ಆಗಬೇಕಾಗಿತ್ತು. ಅನುಯಾಯಿಗಳ ಉದಾಸೀನತೆಯಿಂದ ಆಗಿಲ್ಲ. ಆದ್ದರಿಂದ ನಾವಿಂದು ಸಂಕಲ್ಪತೊಟ್ಟು ಛಲದಿಂದ ಕಾರ್ಯಮಾಡ

ಬೇಕಾಗಿದೆ" ಎಂದು ನುಡಿದರಲ್ಲದೆ, "ಅನುಭವ ಮಂಟಪ ಎಂಬ ಜೇಂಗೂಡಿನಲ್ಲಿ ಬಸವಣ್ಣನವರೆಂಬ ರಾಣಿ ಜೇನಿನ ನೇತೃತ್ವದಲ್ಲಿ ಏಳನೂರು ಎಪ್ಪತ್ತು ಅಮರಗಣಂಗಳೆಂಬ ಶರಣರು ತಮ್ಮ ಅನುಭವದ ಮಕರಂದವನ್ನು ಸಂಗ್ರಹಿಸಿದರು. ವಚನ ಸಾಹಿತ್ಯ ಎಂಬ ಜೇನುತುಪ್ಪವು ಅನುಭವ ಮಂಟಪದ ವಿಶೇಷ ಕಾಣಿಕೆ. ಇದರ ಸಾರವನ್ನಿಂದು ಎಲ್ಲರಿಗೂ ಹಂಚಬೇಕಾಗಿದೆ."ಎಂದರು. 'ಅನುಭವ ಮಂಟಪ' ಎಂಬ ಮಡಿಕೆಯಲ್ಲಿ ಸದ್ಭಕ್ತಿ ಎಂಬ ಕೆನೆ ಮೊಸರನ್ನು ಹಾಕಿ, ತತ್ವನಿಷ್ಠೆ ಎಂಬ ಕಡುಗೋಲನ್ನು ಊರಿ, ಸದಾಚಾರ ಎಂಬ ಹಗ್ಗ ಕಟ್ಟಿ ವಿಚಾರ ಮಂಥನ ಮಾಡಿದಾಗ ವಿಶ್ವಧರ್ಮ ಎಂಬ ಬೆಣ್ಣೆ ಹುಟ್ಟಿ ಬಂದಿತು ಎಂದು ಬಣ್ಣಿಸಿದರು.

ಸಾಮೂಹಿಕ ಮಂಗಲ, ಜಯಘೋಷಗಳೊಡನೆ ಕಾರ್ಯಕ್ರಮವು ಮುಕ್ತಾಯವಾಯಿತು. ರಾಷ್ಟ್ರಕಲ್ಯಾಣ ವಿದ್ಯಾರ್ಥಿಗಣದ ಅಧ್ಯಕ್ಷರಾದ ಶಿವಕುಮಾರ್ ಡಾಕುಳಗಿ ಸ್ವಾಗತ ಭಾಷಣ ಮಾಡಿ, ಸಭಾ ನಿರ್ವಹಣೆ ಮಾಡಿದರು. ಬಸವ ಮಹಾಮನೆ ಚಾರಿಟಬಲ್ ಟ್ರಸ್ಟಿನ ದೆಹಲಿ ಘಟಕದ ಸಂಚಾಲಕರಾದ ಶ್ರೀ ಯುಧಿಷ್ಠರ ವರ್ಮಾರವರು, ಆತ್ಮಪ್ರಕಾಶ್‌ರವರು, ಸಚಿವ ಶ್ರೀ.ಎಸ್.ಆರ್.ಬೊಮ್ಮಾಯಿಯವರ ಖಾಸಗಿ ಕಾರ್ಯದರ್ಶಿ ಶ್ರೀ ವೈಜನಾಥ ಬಿರಾದಾರ ಮತ್ತು ಬಸವ ಧರ್ಮ ಸಮ್ಮೇಳನ ಸಮಿತಿಯ ಸಂಚಾಲಕಿ ಶ್ರೀಮತಿ. ಸೌಭಾಗ್ಯ ಶಿವಣ್ಣ ಅತಿಥಿಗಳಾಗಿದ್ದರು. ಮಾಲಾರ್ಪಣೆಯ ಬಳಿಕ ಶ್ರೀಯುಧಿಷ್ಠರ ವರ್ಮಾರವರು ವಂದನಾರ್ಪಣೆ ಮಾಡಿದರು. ಮಂಗಲದ ನಂತರ ಬಸವ ಪಂಚಮಿಯ ವಿಶೇಷ ಪ್ರಸಾದದ ವಿತರಣೆಯನ್ನು ಮಾಡಲಾಯಿತು.

ಸಮಸ್ಯೆ ಸಮಾಧಾನ

– ಮಾತಾಜಿ

– ಕಲ್ಯಾಣಪ್ಪ ಪರಮಾದಿ, ಹುಬ್ಬಳ್ಳಿ

? ಜಯ ಬಸವರಾಜ ಮಂಗಲಘೋಷ ಹೇಳುತ್ತೇವಲ್ಲವೆ? ಲಿಂಗೈಕ್ಯರ ಸಂಸ್ಕಾರ ಕ್ರಿಯೆಯಲ್ಲಿ, ಅವರ ಸಂಸ್ಮರಣೆಯಲ್ಲಿ ಭಕ್ತಿದಾಯಕ ಮತ್ತು ರಕ್ಷಿಸು ಎಂಬುದು ಸೂಕ್ತವಾಗುವುದಿಲ್ಲ. ಆ ಸನ್ನಿವೇಶಕ್ಕೆ ಬದಲಾಯಿಸಿ ಕೊಡಿರಿ.

* ನನಗೂ ಬಹಳ ದಿನಗಳಿಂದ ಅನಿಸಿತ್ತು. ನೀವು ಹೇಳಿದ್ದು ಒಳ್ಳೆಯದಾಯಿತು. ಲಿಂಗೈಕ್ಯ ಕ್ರಿಯೆ, ಸಂಸ್ಮರಣೆಗೆ ಹೊಂದಿಕೆಯಾಗುವಂತೆ ಹೀಗೆ ಹೇಳಬಹುದು:

ಜಯ ಬಸವರಾಜ ಭಕ್ತಜನ ಸುರಭೂಜ
ಜಯತು ಮಹಕಾರಣಿಕ ಲಿಂಗದೇವನ ಘನತೇಜ
ಜಯತು ಕರುಣಾಸಿಂಧು ಭಜಕಜನ ಬಂಧು
ಜಯ ಮುಕ್ತಿದಾಯಕ ಕರುಣಿಸು ಶ್ರೀ ಗುರು ಬಸವಾ.

– ಚಂದ್ರಕಲಾ ಸೋಮನಾಥ, ಬೆಂಗಳೂರು

? ಮದುವೆಯಲ್ಲಿ ಮಾಂಗಲ್ಯಧಾರಣೆಯಾದ ಬಳಿಕ ಕೆಲವು ಕಡೆ ಗಂಡನ ಕೈಯಿಂದ ಕಾಲುಂಗುರ ಹಾಕಿಸುವರಲ್ಲ ಇದು ಸರಿಯೆ?

* ಶುದ್ಧ ತಪ್ಪು. ಗಂಡನ ಕೈಯಿಂದ ಹಾಕಿಸಬಾರದು. ಅದರ ಅರ್ಥ ಗಂಡನು ಹೆಂಡತಿಯ ಪಾದ ಸೇವಕ ಎಂದಾಗುತ್ತದೆ. ಮಾಂಗಲ್ಯಧಾರಣೆ ಆದ ಮೇಲೆ ಯಾರಾದರೂ ಸಂಬಂಧಿಕ ಹೆಣ್ಣು ಮಕ್ಕಳು ವಧುವಿಗೆ ಕಾಲುಂಗುರ ತೊಡಿಸಬೇಕು.

ಶುಲ್ಕ ಸಹಿತವಾಗಿ ಹೆಚ್ಚಿನ ಸೌಲಭ್ಯದ ವೃದ್ಧಾಲಯದಲ್ಲಿ ಅವಕಾಶ

ಬೆಂಗಳೂರಿನ ಕುಂಬಳಗೋಡು ಗ್ರಾಮ ವ್ಯಾಪ್ತಿಯಲ್ಲಿ ಬರುವ ಬಸವ ಗಂಗೋತ್ರಿ ಯಲ್ಲಿ ವೃದ್ಧಾಶ್ರಮವನ್ನು ನಡೆಸುತ್ತಿದ್ದು ನಿಸ್ಸಹಾಯಕರು ಮತ್ತು ಆರ್ಥಿಕವಾಗಿ ಅಶಕ್ತರೂ ಆದ ಅನೇಕ ವೃದ್ಧರಿಗೆ ಅವಕಾಶ ಕಲ್ಪಿಸಲಾಗಿದೆ. ಸಂಸ್ಥೆಗೆ ಜನರು ಕೊಡುವ ದೇಣಿಗೆಯಿಂದಲೇ ಉಚಿತವಾಗಿ ವೃದ್ಧರಿಗೆ ಊಟ, ವಸತಿ ಮತ್ತು ವೈದ್ಯಕೀಯ ಸೌಲಭ್ಯ ಕೊಡಲಾಗುತ್ತಿದೆ.

ಮತ್ತೆ ಕೆಲವು ಶರಣರು ಇನ್ನೊಂದು ಬೇಡಿಕೆ ಇಟ್ಟಿದ್ದಾರೆ. ಅದೇನೆಂದರೆ ಅವರಿಗೆ ಪ್ರತ್ಯೇಕ ಕೋಣೆ, ಟಿ.ವಿ.ಯ ಸೌಲಭ್ಯ ವಿಶೇಷ ಸೌಕರ್ಯಗಳನ್ನು ಕಲ್ಪಿಸಿಕೊಡಬೇಕು. ಮಾಸಿಕ ಶುಲ್ಕವನ್ನು ಕೊಡಲು ಅವರು ಸಿದ್ಧರಿರುವುದಾಗಿ ಹೇಳುತ್ತಿದ್ದಾರೆ. ಶುಲ್ಕ ಸಹಿತವಾಗಿ ವೃದ್ಧಾಲಯದಲ್ಲಿ ಇರುವವರಿಗೆ ಸಹ ಅವಕಾಶ ಕಲ್ಪಿಸಲು ವ್ಯವಸ್ಥೆ ಮಾಡಲಾಗಿದೆ. ಆದ್ದರಿಂದ ಆಸಕ್ತರಿರುವವರು ಸಂಪರ್ಕಿಸಬಹುದಾದ ವಿಳಾಸವನ್ನು ಕೊಡಲಾಗಿದೆ.

ಪ್ರತ್ಯೇಕ ಕಟ್ಟಡ ನಿರ್ಮಾಣ

ವಾರಸುದಾರರು, ಮಕ್ಕಳು ಇಲ್ಲದಿರುವ ಅನೇಕ ಶ್ರೀಮಂತ ವೃದ್ಧರಿಗೆ ಆಶ್ರಯ ಬೇಕಾಗಿರುತ್ತದೆ. ಅವರಿಗೆ ಕಡೆಯ ದಿನದವರೆಗೆ ಪಾಲನೆ -ಪೋಷಣೆ ಮಾಡಿ ಅವರು ತೀರಿಕೊಂಡ ನಂತರ ಅಂತ್ಯ ಸಂಸ್ಕಾರ ಸಹ ಮಾಡಲಾಗುತ್ತದೆ. ಅವರು ಆಶ್ರಮದ ಆವರಣದಲ್ಲಿ ಪ್ರತ್ಯೇಕ ಮನೆಯನ್ನು ಹೊಂದಿ, ವಾಸವಾಗಿದ್ದು ಊಟೋಪಚಾರಗಳನ್ನು ಆಶ್ರಮದಲ್ಲಿಯೇ ಮಾಡ ಬಯಸುತ್ತಿದ್ದರೆ ಅವರು ಇರುವ ತನಕ ವಾಸವಾಗಿರಲು ಮನೆಯನ್ನು ಸಹ ಕಟ್ಟಿಸಿಕೊಳ್ಳಬಹುದು. ಅವರ ದುಡ್ಡಿನಲ್ಲಿ ಮನೆಯನ್ನು ಕಟ್ಟಿಸಿ ಕೊಡಲಾಗುವುದು. ಅವರ ನಂತರ ಮನೆಯು ಸಂಸ್ಥೆಗೆ ಸೇರುವುದು.

ದೇಣಿಗೆಗಾಗಿ ಮನವಿ

ಮಕ್ಕಳು ಇಲ್ಲದ, ಮಕ್ಕಳಿದ್ದೂ ಕೈಬಿಟ್ಟ ಯಾರ ಆಸರೆಯೂ ಇಲ್ಲದ ವೃದ್ಧರಿಗೆ ಬಸವ ಗಂಗೋತ್ರಿ ವೃದ್ಧಾಶ್ರಮದಲ್ಲಿ ಉಚಿತ (ಫ್ರೀ)ವಾಗಿ ಅವಕಾಶ ಕಲ್ಪಿಸಿದ್ದು ಈಗ ಸ್ಥಳಾಭಾವ ಉಂಟಾಗಿದೆ. ದಿನದಿನಕ್ಕೆ ಈ ವರ್ಗದವರ ಸಂಖ್ಯೆ ಹೆಚ್ಚಾಗುತ್ತಿದೆ. ಆದ್ದರಿಂದ ಇವರಿಗಾಗಿ ಡಾರ್ಮಿಟರಿಗಳನ್ನು ಕಟ್ಟಬೇಕಾಗಿದೆ. ಅವರ ತಾಯಿ ತಂದೆಯರ ಸೇವೆ ಮಾಡಿದಂತೆ ಎಂದು ಭಾವಿಸಿ ದಾನಿಗಳು ವೃದ್ಧಾಶ್ರಮದ ಡಾರ್ಮಿಟರಿ ಕಟ್ಟಲು ಧನ ಸಹಾಯ ಮಾಡಬೇಕೆಂದು ಕೋರುತ್ತೇವೆ.

ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟಿಗೆ 80ಜಿ ಇನ್‌ಕಮ್ ಟ್ಯಾಕ್ಸ್ ರಿಯಾಯಿತಿ ಇದ್ದು ದಾನಿಗಳು ಇದರ ಸದುಪಯೋಗ ಪಡೆದುಕೊಳ್ಳಬಹುದು.

ಸಂಪರ್ಕಿಸುವ ವಿಳಾಸ

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್
ಬಸವ ಮಂಟಪ, 2035, 20ನೇ ಮುಖ್ಯರಸ್ತೆ
2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು -10
ದೂ- 080-23131476/ 9448137508

ಪೂಜ್ಯ ಮಾತೆ ಕಸ್ತೂರಿದೇವಿ
ಬಸವ ಗಂಗೋತ್ರಿ,
ಬೆಂಗಳೂರು ಮೈಸೂರು ಹೆದ್ದಾರಿ
ಕುಂಬಳಗೋಡು, ಬೆಂಗಳೂರು
ದೂ-9845399698

ಬೆಂಗಳೂರಿನಲ್ಲಿ 818ನೆಯ ಬಸವ ಪಂಚಮಿ ಆಚರಣೆ

ವರದಿ: ಬಸವರಸ

ಗುರು ಬಸವಣ್ಣನವರು ಆನಂದನಾಮ ಸಂವತ್ಸರದ ವೈಶಾಖ ಮಾಸದ ಅಕ್ಷಯ ತೃತೀಯಾದಂದು ರೋಹಿಣಿ ನಕ್ಷತ್ರದಲ್ಲಿ (30-4-1134) ಜನಿಸಿ 62 ವರ್ಷ 3 ತಿಂಗಳು 2 ದಿವಸ ಇಳೆಯ ಮೇಲಿದ್ದು ಕ್ರಿಯಾಶೀಲರಾಗಿ ನಳನಾಮ ಸಂವತ್ಸರದ ಶ್ರಾವಣ ಶುದ್ಧ ಪಂಚಮಿಯಂದು ಲಿಂಗೈಕ್ಯರಾಗಿ ಲಿಂಗದೇವನಲ್ಲಿ ಉರಿಯುಂಡ ಕರ್ಪುರದಲ್ಲಿ ಬೆರೆದರು. ಅಂದಿನಿಂದಲೂ ಆ ದಿನವು ಬಸವ ಪಂಚಮಿ ಎಂದು ಖ್ಯಾತಿವೆತ್ತಿದೆ. 1977ರಿಂದಲೂ ಬಸವ ಪಂಚಮಿಯನ್ನು ವಿಶ್ವಕಲ್ಯಾಣ ಮಿಷನ್ ಸಾರ್ವಜನಿಕವಾಗಿ ಆಚರಿಸಿಕೊಂಡು ಬರುತ್ತಿದೆ.

ಪ್ರತಿ ವರ್ಷವೂ ಬಸವ ಪಂಚಮಿಯಂದೇ ಸಂಸ್ಮರಣಾ ಕಾರ್ಯಕ್ರಮವನ್ನು ಸರ್.ಕೆ.ಪಿ.ಪುಟ್ಟಣ್ಣ ಶೆಟ್ಟಿ ಪುರಭವನದಲ್ಲಿ ನಡೆಸಿಕೊಂಡು ಬರಲಾಗುತ್ತಿದೆ. 2013ರ ಸಾಲಿನ ಪಂಚಮಿಯು ಭಾನುವಾರ ಬಂದುದರಿಂದ ಟೌನ್‌ಹಾಲ್ ನಮಗೆ ಲಭ್ಯವಾಗಲಿಲ್ಲ. ಅದಕ್ಕಾಗಿ ಭಾನುವಾರದಂದು ಬಸವ ಮಂಟಪದಲ್ಲೇ ಪೂಜೆ-ಪುಷ್ಪವೃಷ್ಟಿ ಇತ್ಯಾದಿ ಮಾಡಿ ಸೋಮ (ಶಿವ)ವಾರದಂದು ಟೌನ್‌ಹಾಲ್‌ದಲ್ಲಿ ವಿಶೇಷ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಆದಿ ಪ್ರಮಥ ಧರ್ಮಗುರು ಬಸವಣ್ಣನವರ ಪೂಜೆಯನ್ನು ನೆರವೇರಿಸಿದ ಬಳಿಕ, ಸಾಮೂಹಿಕ ಪ್ರಾರ್ಥನೆ ಮಾಡಲಾಯಿತು. ಜಯದೇವ ಹೃದ್ರೋಗ ಕೇಂದ್ರದ ನಿರ್ದೇಶಕರಾಗಿದ್ದ ಶರಣ.ಡಾ|| ಎನ್. ಪ್ರಭುದೇವ ಅವರು ಧ್ವಜಾರೋಹಣವನ್ನು ನೆರವೇರಿಸಿದರು.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಪ್ರಾಸ್ತಾವಿಕವಾಗಿ ಮಾತನಾಡಿದರು. "ಗುರು ಬಸವಣ್ಣನವರು ಬದುಕಿದ್ದು ಕೇವಲ 36 ವರ್ಷ ಎಂದು ಕೆಲವು ಸಾಹಿತಿಗಳು ಬರೆಯುತ್ತಾರೆ. ಇದು ಸತ್ಯವಲ್ಲ. ಅವರು ಈ ಇಳೆಯ ಮೇಲೆ ಬದುಕಿದ್ದುದು 63 ವರ್ಷ. 'ಅಯ್ಯಾ ಭಕ್ತಿಗೆ ಬೀಡಾದುದು ಕಲ್ಯಾಣ 36 ವರ್ಷ, ಅನುಭವಕ್ಕೆ ಶಿವಸದನವಾದುದು27 ವರ್ಷ' ಎಂಬ ಗುರು ಬಸವಣ್ಣನವರ ವಚನ ಹೇಳುತ್ತದೆ, ಅನುಭವ ಮಂಟಪ 27 ವರ್ಷ ಕಾಲ ನಡೆಯಿತು ಎಂದು ಇದರ ಅರ್ಥ. ಗುರು ಬಸವಣ್ಣನವರು ಕಲ್ಯಾಣವನ್ನು ಪ್ರವೇಶಿಸಿದುದು ವಿಕ್ರಮನಾಮ ಸಂವತ್ಸರ (1160)ದಲ್ಲಿ. ಗಡಿಪಾರಾಗಿ ಕಲ್ಯಾಣದಿಂದ ನಿರ್ಗಮಿಸಿದುದು ರಾಕ್ಷಸನಾಮ ಸಂವತ್ಸರದಲ್ಲಿ (1196). 36 ವರ್ಷ ಕಲ್ಯಾಣದಲ್ಲಿ ಅವರು ವಾಸವಾಗಿದ್ದರು. ಮನೆಯಲ್ಲಿದ್ದುದು 8-9 ವರ್ಷ, ಕೂಡಲ ಸಂಗಮದ ಗುರುಕುಲದಲ್ಲಿ ಇದ್ದುದು 12 ವರ್ಷ, ವಿವಾಹವಾಗಿ ಮಂಗಳವೇಡೆಯಲ್ಲಿ ಕರಣಿಕರಾಗಿ ಇದ್ದುದು 5 ವರ್ಷ. ಹೀಗೆ ಅವರ ಜೀವಿತಾವಧಿ 62 ವರ್ಷ 3 ತಿಂಗಳು, 2 ದಿವಸ.

ಗುರು ಬಸವಣ್ಣನವರ ಜೀವನ ಕುರಿತು ಇರುವ ಇನ್ನೊಂದು ತಪ್ಪು ಕಲ್ಪನೆ ಎಂದರೆ ಅವರ ಅಂತ್ಯ ಕುರಿತು. ವಿಜಯ ವಾಣಿ ಪತ್ರಿಕೆಯಲ್ಲಿ ಶ್ರೀ ಮುರುಘಾ ಶರಣರು ಒಂದು ಅಸಂಬದ್ಧವಾದ ಲೇಖನ ಪ್ರಕಟಿಸಿದ್ದರು. ಅದರಲ್ಲಿ ಯಾವುದೊಂದೂ ಖಚಿತ ಅಭಿಪ್ರಾಯ ಕೊಡದೆ, "ಗುರು ಬಸವಣ್ಣನವರು ಆತ್ಮಹತ್ಯೆ ಮಾಡಿಕೊಂಡರೋ, ತಮ್ಮ ಕ್ರಾಂತಿಕಾರಿ ವಿಚಾರಗಳಿಗಾಗಿ ವಧೆಯಾದರೋ ಇದೆಲ್ಲವೂ ಸಂದಿಗ್ಧವಾಗಿದೆ." ಎಂದು ತಮ್ಮ ಮನಸ್ಸಿನ ಗೊಂದಲವನ್ನು ಜನತೆಯ ಕಡೆಗೆ ಹರಿಸಿದ್ದರು. ಈ ಸ್ವಾಮೀಜಿ ಗುರು ಬಸವಣ್ಣನವರ ವಚನಗಳನ್ನು ಓದಿದ್ದಾರೋ ಇಲ್ಲವೊ! ಓದಿದರೆ ಅವರಿಗೆ ಅರ್ಥವಾಗುತ್ತೋ ಇಲ್ಲವೊ! ಗುರು ಬಸವಣ್ಣನವರಿಗೆ ಆತ್ಮಹತ್ಯೆ ಮಾಡಿಕೊಳ್ಳುವಂತಹ ಅನಿವಾರ್ಯತೆ ಏನೂ ಇರಲಿಲ್ಲ. ಅದು ದುರ್ಬಲ ಮನದವರ ಕೆಲಸ. ಇನ್ನು ವಧೆಯಾದರೆ? ಒಂದು ವೇಳೆ ಮಾರ್ಗಮಧ್ಯದಲ್ಲಿ ವಧೆಯಾಗಿದ್ದರೆ ಅನುಯಾಯಿಗಳು ಆ ಸ್ಥಳವನ್ನು ಸ್ಮಾರಕವಾಗಿ ಮಾಡುತ್ತಿದ್ದರು. ಬಿಜ್ಜಳನ ಸೈನ್ಯ ಬೆನ್ನುಹತ್ತಿದ್ದು ವಚನ ಸಾಹಿತ್ಯವನ್ನು ತೆಗೆದುಕೊಂಡು ಹೊರಟ ತಂಡವನ್ನೇ ಹೊರತು ಏಕಾಂಗಿಯಾಗಿ ಹೊರಟ ಗುರು

ಬಸವಣ್ಣನವರನ್ನಲ್ಲ. ಅವರು ಆತ್ಮಹತ್ಯೆಯನ್ನು ಮಾಡಿಕೊಳ್ಳಲಿಲ್ಲ; ವಧೆಯೂ ಆಗಲಿಲ್ಲ; ಬದಲಿಗೆ ಇಚ್ಛಾಮರಣಿಯಾಗಿ ಯೋಗಶಕ್ತಿಯಿಂದ ದೇಹವನ್ನು ಬಿಟ್ಟರು. ಗುರು ಬಸವಣ್ಣನವರು ಶ್ರೇಷ್ಠ ಸಮಾಜ ಸುಧಾರಕರಾದಂತೆ ಉನ್ನತ ಮಟ್ಟದ ಯೋಗಿಗಳೂ ಆಗಿದ್ದರು. ಅವರು ಗೂಡಿನ ಪಕ್ಷಿಯಾಗಿದ್ದರೇ ವಿನಾ ಪಂಜರದ ಪಕ್ಷಿಯಾಗಿರಲಿಲ್ಲ. ಪಂಜರದ ಪಕ್ಷಿ ಬಾಗಿಲು ತೆರೆದಾಗ ಮಾತ್ರ ಹೊರಗೆ ಹಾರಬಲ್ಲುದು. ಬದ್ಧ ಜೀವಿಯಾದವನು ಸಾವು ಬಂದಾಗ ಮಾತ್ರ ಆತ್ಮವನ್ನು ಹೊರಗೆ ವಿಸರ್ಜಿಸಬಲ್ಲನು. ಜೀವನ್ಮುಕ್ತನು ಯಾವಾಗ ತನಗೆ ಇಚ್ಛೆಯುಂಟಾಗುವುದೋ ಆಗ ದೇಹದಿಂದ ಬೇರ್ಪಡಿಸಬಲ್ಲನು. ಜೀವನ್ಮುಕ್ತರಾಗಿದ್ದ ಬಸವಣ್ಣನವರು ಕಾಯ ಜೀವದ ಹೊಲಿಗೆಯನ್ನು ಬಿಚ್ಚಿಕೊಂಡವರಾಗಿದ್ದರು. ತಮ್ಮ ಆತ್ಮವಾದ ಯೋಗ ಶಕ್ತಿಯಿಂದ ಕುಂಡಲಿನಿಯನ್ನು ಜಾಗೃತಗೊಳಿಸಿ, ಮೇಲೇರಿಸಿ ಇಚ್ಛಾಮರಣಿಯಾಗಿ ಆತ್ಮವನ್ನು ದೇಹದಿಂದ ಬೇರ್ಪಡಿಸಿ ಲಿಂಗದೇವನಲ್ಲಿ ಲೀನ ಮಾಡಿದರು. ಅವರು ಒಂದು ವಚನವೇ ಇದಕ್ಕೆ ಸಾಕ್ಷಿ.

ಭಕ್ತಿಯೆಂಬ ಪೃಥ್ವಿಯ ಮೇಲೆ
ಗುರುವೆಂಬ ಬೀಜವಂಕುರಿಸಿ
ಲಿಂಗವೆಂಬ ಎಲೆಯಾಯಿತ್ತು
ವಿಚಾರವೆಂಬ ಹೂವಾಯಿತ್ತು
ಆಚಾರವೆಂಬ ಕಾಯಾಯಿತ್ತು
ನಿಷ್ಪತ್ತಿಯೆಂಬ ಹಣ್ಣಾಯಿತ್ತು
ನಿಷ್ಪತ್ತಿಯೆಂಬ ಹಣ್ಣು ತಾನು ತೊಟ್ಟು ಕಳಚಿ ಬೀಳುವಲ್ಲಿ
ಲಿಂಗದೇವ ತನಗೆ ಬೇಕೆಂದು ಎತ್ತಿಕೊಂಡ

ಪೂಜ್ಯ ಮಾತಾಜಿಯವರ ಪ್ರಸ್ತಾವನೆಯ ನಂತರ ಸಣ್ಣ ಕೈಗಾರಿಕಾ ಉದ್ಯಮ ನಿಗಮದ ಆಯುಕ್ತರಾದ ಶರಣ ಡಾ॥ ಸಿ.ಸೋಮಶೇಖರ್ ಅವರು ದೀಪವನ್ನು ಬೆಳಗಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಹುಟ್ಟಿನಿಂದ ಅಂಧಳಾದರೂ ಆತ್ಮವಿಶ್ವಾಸದ ಹೆಜ್ಜೆಗಳನ್ನಿಟ್ಟು ವಿಶ್ವಸಂಸ್ಥೆಯಲ್ಲಿ ಗಾರ್ಡನ್ ಬ್ರೌನ್ ಪ್ರಶಸ್ತಿ ಪಡೆದ ಕುಮಾರಿ ಅಶ್ವಿನಿ ಪ್ರಕಾಶ್ ಅಂಗಡಿ, ವೈದ್ಯಕೀಯ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ ಶರಣ.ಡಾ॥ಎನ್.ಪ್ರಭುದೇವ್, ಬಸವ ತತ್ವ ಪ್ರಸಾರ ಕೇಂದ್ರ ಸ್ಥಾಪಿಸಿ 252 ಪುಸ್ತಕ ಪ್ರಕಟಿಸಿರುವ ಶರಣ.ಡಾ॥ ಆರ್.ಶಿವಣ್ಣ ಅವರಿಗೆ "ಶರಣ ರತ್ನ" ಪ್ರಶಸ್ತಿ ನೀಡಿ ಗೌರವಿಸಲಾಯಿತು. ಶರಣ.ಡಾ॥ ಸಿ.ಸೋಮಶೇಖರ್ ವಿಶೇಷ ಉಪನ್ಯಾಸ ನೀಡಿ ಸಭೆಯ ಮೆಚ್ಚುಗೆಗೆ ಪಾತ್ರರಾದರು. ಜಾತಿ ವರ್ಣ ವರ್ಗರಹಿತ ಸಮಾಜವನ್ನು ಗುರು ಬಸವಣ್ಣನವರು ಹೇಗೆ ಕಟ್ಟಿದರು ಎಂಬುದನ್ನು ಮನಂಬುಗುವಂತೆ ಬಣ್ಣಿಸಿ, ಅವರ ಯಶಸ್ಸಿಗೆ ಕಾರಣವಾದುದು ನಡೆ-ನುಡಿಗಳ ಸಾಮರಸ್ಯ ಎಂದು ತಿಳಿಸಿದರು.

ಖ್ಯಾತ ಸಂಗೀತಗಾರ ಶರಣ.ರವೀಂದ್ರ ಸೋರಗಾವಿ, ಮಧುವಂತಿ ಹಳ್ಳಿಯವರು ವಚನಗಳನ್ನು ಮಧುರ ಕಂಠದಿಂದ ಹಾಡಿದರು. ಚಿನ್ಮಯಜ್ಞಾನಿ ಚನ್ನಬಸವಣ್ಣನವರ ಜ್ಞಾನಪೀಠದ ಪೀಠಾಧ್ಯಕ್ಷರಾದ ಪೂಜ್ಯ ಶ್ರೀ ಜಗದ್ಗುರು ಚನ್ನಬಸವಾನಂದ ಸ್ವಾಮಿಗಳು ಬಸವ ವಚನಾಮೃತ ಭಾಗ-12, 108 ವಚನಗಳ ಪುಸ್ತಕ ಬಿಡುಗಡೆ ಮಾಡಿ, ಮಾತನಾಡಿದರು. ಗ್ರಂಥ ದಾನಿಗಳಾದ ಶರಣ.ಬಾಣೂರು ಹಿರಣ್ಣಯ್ಯ ಮತ್ತು ಶರಣ.ಚಂದ್ರಮೌಳಿ ಇವರನ್ನು ಸನ್ಮಾನಿಸಲಾಯಿತು. ಇಷ್ಟಲಿಂಗ ಪೂಜೆಯ ಮರ್ಮವೇನು ಎಂಬ ಪುಸ್ತಿಕೆಯನ್ನು ಪೂಜ್ಯ ಶ್ರೀ ಜಗದ್ಗುರು ಬಸವ ಕುಮಾರ ಸ್ವಾಮಿಗಳು ಬಿಡುಗಡೆ ಮಾಡಿದರು. ಗ್ರಂಥದ ಲೇಖಕರಾದ ಶರಣ.ಎಂ.ಎಸ್. ಚಂದ್ರ ಶೇಖರಯ್ಯ ಅವರನ್ನು ಸತ್ಕರಿಸಲಾಯಿತು. ರಾಷ್ಟ್ರೀಯ ಬಸವ ದಳದ 3 ಜನ ಶರಣರಿಗೆ "ಕಾಯಕ ಕಲಿ" ಪ್ರಶಸ್ತಿ ಪ್ರದಾನ ಮಾಡಲಾಯಿತು. ಲಿಂಗಾಯತ ಧರ್ಮ ಮಹಾಸಭಾದ ಗೌರವಾಧ್ಯಕ್ಷ ಶರಣ.ಎಸ್.ಪುಟ್ಟರುದ್ರ ಅವರು ಅಧ್ಯಕ್ಷತೆ ವಹಿಸಿದ್ದರು. ಕುಮಾರಿಯರಾದ ನಿಸರ್ಗ ನಾಗರಾಜು,

ಸ್ವಾತಿ ಮತ್ತು ಶೃತಿ ಮದ್ದೂರು, ಚೈತ್ರ ದಾಸೇಗೌಡ, ಅನುಷಾ ರಾಜಶೇಖರ್, ಸಂತೋಷಿ ಮುಂತಾದವರು ವಚನ ನೃತ್ಯಾಭಿನಯ ಮಾಡಿದರು. ಶರಣೆ.ಭಾಗ್ಯಮ್ಮ ತಿಪ್ಪೇಸ್ವಾಮಿ ಇವರ ನೇತೃತ್ವ ಹಾಗೂ ನಿರೂಪಣೆಯಲ್ಲಿ 26 ಮಂದಿ ಶರಣೆಯರ ದರ್ಶನ ಮಾಡಿಸುವ "ಶರಣೆಯರ ಭಕ್ತಿ ವೈಭವ" ಎಂಬ ರೂಪಕ ಪ್ರದರ್ಶನಗೊಂಡಿತು.

ಅಂತಿಮವಾಗಿ ಗುರು ಬಸವಣ್ಣನವರಿಗೆ ಶ್ರದ್ಧಾಂಜಲಿ ಸಲ್ಲಿಸುವ ಸಲುವಾಗಿ ಪೂಜೆ ನೆರವೇರಿತು. ಪುಷ್ಪವೃಷ್ಟಿಯ ನಂತರ 63 ಆರತಿಯನ್ನು ಬೆಳಗಲಾಯಿತು. ಮಂಗಲದೊಡನೆ ಕಾರ್ಯಕ್ರಮ ಮುಕ್ತಾಯಗೊಂಡಿತು. ದಿ.13-8-2013ರಂದು ರಾಜಾಜಿನಗರದ ಬಸವ ಮಂಟಪದಲ್ಲಿ ನೀಲಮ್ಮ ಷಷ್ಠಿಯನ್ನು ಆಚರಿಸಲಾಯಿತು. ಸಾಮೂಹಿಕ ಲಿಂಗಪೂಜೆಯೊಡನೆ ನೆರವೇರಿದ ಈ ಕಾರ್ಯಕ್ರಮದಲ್ಲಿ ನೂರಾರು ಜನ ಶರಣ ಶರಣೆಯರು ಭಾಗವಹಿಸಿದ್ದರು.

ಗೌರವ ಡಾಕ್ಟರೇಟ್ ಪ್ರದಾನ

Divine Hands International University ಸಂಸ್ಥೆಯು ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ಸಾಧನೆ ಮತ್ತು ಸಮಾಜ ಸೇವೆಯನ್ನು ಗುರುತಿಸಿ ದಿ.28-5-2013ರಂದು Doctor of Humanity ಎಂಬ ಗೌರವ ಡಾಕ್ಟರೇಟನ್ನು ದಯಪಾಲಿಸಿದೆ. ಯು.ಎಸ್.ಎಯ ಅಂತರರಾಷ್ಟ್ರೀಯ ವಿಶ್ವವಿದ್ಯಾನಿಲಯಕ್ಕೆ ಸಂಬಂಧಿಸಿ ಭಾರತದಲ್ಲಿ ದೆಹಲಿಯಲ್ಲಿ ಕೇಂದ್ರ ಕಛೇರಿ ಹೊಂದಿರುವ ಈ ಸಂಸ್ಥೆಯ ಉಪಕುಲಪತಿಗಳಾದ ರೆವರೆಂಡ್ ಡಾ॥ರೂಬೆನ್ ಸಾಲೊಮನ್ ದೆಹಲಿಯಿಂದ ಮತ್ತು ಅದರ ಪ್ರಾಂತೀಯ ನಿರ್ದೇಶಕರಾದ ರೆವರೆಂಡ್ ಡಾ॥ ಜೋಷುವಾ ಅಮಲದಾಸನ್ ಅವರು ಚೆನ್ನೈಯಿಂದ ಆಗಮಿಸಿ 818ನೆಯ ಬಸವ ಲಿಂಗೈಕ್ಯ ಸಂಸ್ಮರಣೆಯ ಸಮಾರಂಭದಲ್ಲಿ ಅಧಿಕೃತವಾಗಿ ಗೌರವ ಡಾಕ್ಟರೇಟನ್ನು ನೀಡಿದರು. ಅದರಲ್ಲಿ ಬರೆಯಲ್ಪಟ್ಟಿರುವ ಪದಗಳು ಕೆಳಕಂಡಂತಿವೆ.

Be it know to all men by these presents, That

MATHA MAHADEVI

Has evidenced a Divine character consistent and has recognised and honored for her management and leadership skills as well as her compassion and love for the poor and the needy. and therefore she had been awarded this prestigious Degree

Doctor of Humanity

(Honoirs Causa)

Reg No:- 9990017/2013

ಶರಣ ರತ್ನ ಪ್ರಶಸ್ತಿ ಪ್ರದಾನ ಮಾಡಿದವರ

ಕಿರು ಪರಿಚಯ

ಶರಣ.ಡಾ॥ ಆರ್.ಶಿವಣ್ಣ

ಶರಣ.ಡಾ॥ ಆರ್.ಶಿವಣ್ಣನವರು ಬೆಂಗಳೂರು ಜಿಲ್ಲೆಯ ತಾವರಕೆರೆ ಹೋಬಳಿಯ ಚುಂಚನಕುಪ್ಪೆಯಲ್ಲಿ ದಿ.20-8-1936ರಂದು ಜನಿಸಿದರು. ಗ್ರಂಥಾಲಯ ವಿಜ್ಞಾನದಲ್ಲಿ ಡಾಕ್ಟರೇಟ್‌ವರೆಗೂ ಅಧ್ಯಯನ ಮಾಡಿ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಉಪ ಗ್ರಂಥಪಾಲರಾಗಿ ಕಾಯಕ ನಿರ್ವಹಿಸಿ ನಿವೃತ್ತರಾಗಿದ್ದಾರೆ. ನಿವೃತ್ತಿಯ ನಂತರ ಬಸವ ತತ್ವ

ಪ್ರಚಾರ ಕೇಂದ್ರವನ್ನು ಮತ್ತು ಸಂಶೋಧನ ಗ್ರಂಥಾಲಯವನ್ನು ಸ್ಥಾಪಿಸಿ, ಅಪಾರ ಪ್ರಮಾಣದ ಸಾಹಿತ್ಯವನ್ನು ಪ್ರಕಟಿಸಿದ್ದಾರೆ. ಒಂದು ವಿಶ್ವವಿದ್ಯಾಲಯವು ಪ್ರಕಟಿಸಲಾರದಷ್ಟು ಸಾಹಿತ್ಯವನ್ನು ಒಬ್ಬ ವ್ಯಕ್ತಿ ಪ್ರಕಟಿಸಿರುವುದು ಅಭಿನಂದನೀಯ. ವಚನ ಸಾಹಿತ್ಯ, ಶರಣರ ಕುರಿತು ವೈವಿಧ್ಯಮಯವಾಗಿ ಪ್ರಕಟಿಸಿ ಜನ ಸಾಮಾನ್ಯರನ್ನು ಶರಣರು ತಲ್ಪುವಂತೆ ಮಾಡಿದ್ದಾರೆ. ಬಸವ ತತ್ವ ಪ್ರಚಾರದ ಈ ಮಹತ್ಸಾಧನೆ ಗುರುತಿಸಿ ಶರಣ ಆರ್.ಶಿವಣ್ಣನವರಿಗೆ ಬಸವ ಧರ್ಮ ಪೀಠವು "ಶರಣ ರತ್ನ" ಪ್ರಶಸ್ತಿಯನ್ನು ನೀಡಿ ಸನ್ಮಾನಿಸುತ್ತಿದೆ. ಅವರಿಂದ ಇನ್ನೂ ಹೆಚ್ಚಿನ ವಚನ ಸಾಹಿತ್ಯ ಕೃತಿಗಳು ಹೊರಬರಲೆಂದು ಹಾರೈಸುತ್ತೇವೆ. ಸೃಷ್ಟಿಕರ್ತ ಲಿಂಗದೇವ, ಧರ್ಮಕರ್ತ ಬಸವಣ್ಣನವರು ಅವರಿಗೆ ಆಯುರಾರೋಗ್ಯ ಭಾಗ್ಯ ಸಕಲ ಸಂಪದವನ್ನು ನೀಡಲೆಂದು ಹಾರೈಸುತ್ತೇವೆ.

ಕುಮಾರಿ. ಅಶ್ವಿನಿ ಅಂಗಡಿ

ಸಾಧನೆಯ ಹಾದಿಗೆ ಅಂಧತ್ವ ಅಡ್ಡಿಯಾಗುವುದಿಲ್ಲ ಎಂಬುದನ್ನು ಬೆಂಗಳೂರಿನ ಅಶ್ವಿನಿ ಅಂಗಡಿ ಸಾಧಿಸಿ ತೋರಿದ್ದಾರೆ. ಎರಡು ವರ್ಷಗಳಿಂದ 'ಯುವಧ್ವನಿ' ಸಂಘಟನೆಯ ಮೂಲಕ ಅಂಗವಿಕಲರ ಹಕ್ಕುಗಳಿಗಾಗಿ ಹೋರಾಡುತ್ತಿರುವ ಅವರ ವಿಶಿಷ್ಟ ಸೇವೆಯನ್ನು ಗುರುತಿಸಿ ವಿಶ್ವಸಂಸ್ಥೆಯು ಜುಲೈ 12ರ 'ಮಲಾಲಾ ದಿನಾಚರಣೆ'ಯಂದು 'ಗಾರ್ಡನ್ ಬ್ರೌನ್' ಯುವ ಸಾಧಕ ಪ್ರಶಸ್ತಿಯನ್ನು ಅವರಿಗೆ ನೀಡಿದೆ.

ಅಂಗವಿಕಲರ ಶಿಕ್ಷಣದಲ್ಲಿನ ನ್ಯೂನತೆ ತೊಡೆದು ಹಾಕುವ ಕಾರ್ಯದಲ್ಲಿ ನಿರತರಾಗಿರುವ ಅಶ್ವಿನಿ, ಸದ್ಯ 'ಯುವಧ್ವನಿ'ಯ ಜೊತೆಗೆ ಲಿಯೋನಾರ್ಡ್ ಚೆಶೈರ್ ಡಿಸೆಬಿಲಿಟಿ ಸ್ವಯಂಸೇವಾ ಸಂಸ್ಥೆಯಲ್ಲಿ ಅಂಗವಿಕಲರಿಗೆ ಮಾಹಿತಿ ನೀಡುವ ಕೆಲಸ ಮತ್ತು ಹೋರಾಟದಲ್ಲಿ ತೊಡಗಿಸಿಕೊಂಡಿದ್ದಾರೆ.

ಮೂಲತಃ ಬಳ್ಳಾರಿ ಜಿಲ್ಲೆಯ ಚೆಳ್ಳಗುರ್ಕಿಯವರಾದ ಅವರು ಸದ್ಯ ನಗರದ ಶೇಷಾದ್ರಿಪುರದಲ್ಲಿ ಅಪ್ಪ ಅಮ್ಮನ ಜತೆ ವಾಸವಾಗಿದ್ದಾರೆ. ಜೆ.ಪಿ.ನಗರದ ರಮಣಶ್ರೀ ಅಂಧರ ಕೇಂದ್ರದಲ್ಲಿ ಪ್ರಾಥಮಿಕ ಶಿಕ್ಷಣ, ಎನ್‌ಎಂಕೆಆರ್‌ವಿ ಕಾಲೇಜಿನಲ್ಲಿ ಪಿಯುಸಿ, ಮಹಾರಾಣಿ ಕಾಲೇಜಿನಲ್ಲಿ ಬಿ.ಎ ವ್ಯಾಸಂಗ ಮಾಡಿದ್ದಾರೆ. 'ಕನಸುಗಳನ್ನು ಕಾಣಲು ಕಣ್ಣುಗಳ ಅಗತ್ಯವಿಲ್ಲ' ಎಂದು ಆತ್ಮವಿಶ್ವಾಸದಿಂದ ನುಡಿಯುವ ಅಶ್ವಿನಿಯನ್ನು ಬಸವ ಧರ್ಮ ಪೀಠವು "ಶರಣ ರತ್ನ" ಪ್ರಶಸ್ತಿಯನ್ನು ನೀಡಿ ಸನ್ಮಾನಿಸುತ್ತಿದೆ. ಕುಮಾರಿ.ಅಶ್ವಿನಿ ಅಂತರ್ರಾಷ್ಟ್ರೀಯ ಮಟ್ಟದಲ್ಲಿ ಕೀರ್ತಿ ಶ್ರೇಷ್ಠರಾಗಲೆಂದು, ಸೃಷ್ಟಿಕರ್ತ ಲಿಂಗದೇವ, ಧರ್ಮಕರ್ತ ಬಸವಣ್ಣನವರು ಅವರಿಗೆ ಆಯುರಾರೋಗ್ಯ ಭಾಗ್ಯ ಸಕಲ ಸಂಪದವನ್ನು ನೀಡಲೆಂದು ಹಾರೈಸುತ್ತೇವೆ.

ಶರಣ.ಡಾ|| ಎನ್.ಪ್ರಭುದೇವ್

ಶರಣ.ಡಾ|| ಪ್ರಭುದೇವ ಅವರು ವೈದ್ಯಕೀಯ ಕ್ಷೇತ್ರದಲ್ಲಿ ಖ್ಯಾತನಾಮರು. ಜಯದೇವ ಹೃದಯರೋಗ ಚಿಕಿತ್ಸಾ ಕೇಂದ್ರದ ನಿರ್ದೇಶಕರಾಗಿ ಸೇವೆ ಸಲ್ಲಿಸಿದ ಶ್ರೀಯುತರು ಹೃದಯದ ಶಸ್ತ್ರ ಚಿಕಿತ್ಸೆಯಲ್ಲಿ ಅಪಾರ ಪರಿಣತಿ ಹೊಂದಿದವರು. ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿಗಳಾಗಿ ಆಡಳಿತ ನಿರ್ವಹಿಸಿದವರು. ಅವರದು ಸಂಘರ್ಷದ ಬದುಕು. ಜಾತಿ ರಾಜಕೀಯದ ಬೀಡಾದ ನಮ್ಮ ದೇಶದಲ್ಲಿ ಸತ್ಯದ ಪರವಾಗಿ ಸೈದ್ಧಾಂತಿಕ ನಿಲುವಿಗೆ ಬದ್ಧರಾಗುವವರು ವಿರಳ. ಆದರೆ ಡಾ||ಪ್ರಭುದೇವರವರು ಸತ್ಯಕ್ಕೆ ಬದ್ಧರಾಗಿ ನಿಂತವರು. ವೈದ್ಯಕೀಯ ಸೇವೆಯನ್ನೇ ಪರಮ ಧ್ಯೇಯವನ್ನಾಗಿಸಿಕೊಂಡ ಅವರದು ಸಾರ್ಥಕದ ಬಾಳು. ವೈದ್ಯಕೀಯ ಕ್ಷೇತ್ರದಲ್ಲಿ ಅವರ ವಿಸ್ತಾರವಾದ ಸೇವೆಯನ್ನು ಗುರುತಿಸಿ ಬಸವ ಧರ್ಮ ಪೀಠವು "ಶರಣ ರತ್ನ" ಪ್ರಶಸ್ತಿಯನ್ನು ನೀಡಿ ಸನ್ಮಾನಿಸುತ್ತಿದೆ. ಸೃಷ್ಟಿಕರ್ತ ಲಿಂಗದೇವ, ಧರ್ಮಕರ್ತ ಬಸವಣ್ಣನವರು ಅವರಿಗೆ ಆಯುರಾರೋಗ್ಯ ಭಾಗ್ಯ ಸಕಲ ಸಂಪದವನ್ನು ನೀಡಲೆಂದು ಹಾರೈಸುತ್ತೇವೆ.



ಶರಣ. ಶ್ರೀಕಂಠಮೂರ್ತಿಯವರಿಗೆ ಬೆಂಗಳೂರು ರಾಷ್ಟ್ರೀಯ ಬಸವ ದಳದಿಂದ ಸನ್ಮಾನ





ಬಸವ ಪಂಚಮಿಯಂದು ಬೆಂಗಳೂರಿನ ಕುಷ್ಠರೋಗ ಆಸ್ಪತ್ರೆಯಲ್ಲಿ ರಾಷ್ಟ್ರೀಯ ಬಸವ ದಳದಿಂದ ರೋಗಿಗಳಿಗೆ ಹಾಲು ಹಣ್ಣು ವಿತರಿಸುವ ಕಾರ್ಯಕ್ರಮ



ಧಾರವಾಡದಲ್ಲಿ ಬಸವ ಜ್ಯೋತಿ ಪ್ರಾರಂಭೋತ್ಸವ. ಉದ್ಘಾಟನೆ: ಶರಣ. ಜಿ. ಬಿ. ನಂದನ, ಧ್ವಜಾರೋಹಣ: ಶರಣ. ಡಾ|| ಮಹಾದೇವಪ್ಪ ದಳಪತಿ



ಸಾಂಸ್ಕೃತಿಕ ಕಾರ್ಯಕ್ರಮ: ಸ್ವಾತಿ ಮತ್ತು ಶ್ರುತಿ, ನಿಸರ್ಗಾ ನಾಗರಾಜು, ಚೈತ್ರಾ ದಾಸೇಗೌಡ,
ಸಂತೋಷಿ ಸ್ನೇಹಾಳಿಂದ ಯಕ್ಷಗಾನ, ಭಾಗ್ಯಮ್ಮ ತಿಪ್ಪೇಸ್ವಾಮಿ ನೇತೃತ್ವದಲ್ಲಿ ಶರಣೆಯರ ಭಕ್ತಿವೈಭವ ರೂಪಕ

Registerd NO/KA/BGW/50/2012-2014, RNI 19980/70, POSTED AT MBC BANGALORE GPO ON 3rd,10th,20th, OF EVERY MONTH. LICENCED TO POST WITHOUT PRE PAYMENT WPP-17, PAGES 32+4 (COVER PAGES)